ಅಧ್ಯಾಯ - 10

# ನ್ಯಾಯಾಡಳಿತ ಮತ್ತು ಶಾಂತಿಪಾಲನೆ

ಪ್ರಾಚೀನ ಕರ್ನಾಟಕದಲ್ಲಿ ನ್ಯಾಯ ತೀರ್ಮಾನವು ಗ್ರಾಮಸಭೆ ಇಲ್ಲವೇ ಪಟ್ಟಣ ಸಮುದಾಯಗಳೆಂಬ ಸ್ಥಳೀಯ ಆಡಳಿತ ಸಂಸ್ಥೆಗಳಿಂದ ಬಹುಮಟ್ಟಿಗೆ ನಡೆಯುತ್ತಿತ್ತು. ಅಗ್ರಹಾರಗಳಲ್ಲಿ ಮಹಾಜನರ ಸಭೆ ಇತ್ತು. ಕೆಲವೊಮ್ಮೆ ಜಾತಿಯ ಶ್ರೇಣಿ (ಗಿಲ್ಡ್) ಅಥವಾ ನಿಗಮಗಳೇ ಈ ಕಾರ್ಯ ಮಾಡುತ್ತಿದ್ದವು. ಜಾತಿಗಳು ನಿರ್ಣಯಿಸುವ ವಿಚಾರಗಳು ಕೌಟುಂಬಿಕ ವ್ಯವಹಾರ (ಗಂಡಹೆಂಡಿರ ವ್ಯಾಜ್ಯಗಳು), ಆಸ್ತಿಪಾಲುಗಾರಿಕೆಯ ವ್ಯಾಜ್ಯಗಳು, ಸಾಮಾಜಿಕ ಸ್ಥಾನಮಾನಗಳಿಗೆ ಸಂಬಂಧಿಸಿದ ವ್ಯಾಜ್ಯಗಳು ಇರುತ್ತಿದ್ದವು. ಜಾತಿಯ ಹಿರಿಯರು ಅಥವಾ ಕಟ್ಟೆಮನೆಗಳೂ ಇದ್ದವು. ತೆಲ್ಲಿಗ ಐವತ್ತು ಎಂಬ ಜಾತಿ ಶ್ರೇಣಿ (ಗಾಣಿಗರದು), ಉಗುರ ಮುನ್ನೂರ್ವರು ಅಥವಾ ಗಳೆಮುನ್ನೂರ್ವರು ಎಂಬ ತೋಟದ ಕೆಲಸಗಾರರ ಶ್ರೇಣಿ ಇವೆಲ್ಲ ಜಾತಿ ಸಂಘಟನೆಗಳಿಗೆ ಉದಾಹರಣೆಗಳು. ಅದೇ ರೀತಿ ಊರ ಸಮುದಾಯಗಳೆಂದರೆ ಹಿರಿಯ ಕುರಿಯಟ್ಟಿಯ ಐವತ್ತೊಕ್ಕಲು, ಕೊಡಮಗ್ಗಿಯ ಅರ್ವತ್ತೊಕ್ಕಲು, ನೀರಲಗಿಯ ಅರುವತ್ತೊಕ್ಕಲು ಮುಂತಾದ ಗ್ರಾಮಸಭೆಗಳ ಉಲ್ಲೇಖವಿದೆ. ಅಗ್ರಹಾರಗಳಲ್ಲಿ ಜಕ್ಕಲಿಯ 200 ಮಹಾಜನರು, ಅಮ್ಮಿನಭಾವಿಯ 400 ಮಹಾಜನರು, ಚಿಕ್ಕೆರೂರ 1000 ಮಹಾಜನರು ಹೀಗೆ ಉಲ್ಲೇಖ ಬರುತ್ತದೆ. ಒಂದು ಊರಲ್ಲಿ ಅಗ್ರಹಾರವು ಅದರ ಭಾಗವಾಗಿದ್ದಾಗ ಅಗ್ರಹಾರದ ಮಹಾಜನರೂ ಊರ ಒಕ್ಕಲೂ ಕೂಡಿ ಊರ ಆಡಳಿತ ನಡೆಸುತ್ತಿದ್ದ ಸಂಗತಿ ನೀರಲಗಿಯಲ್ಲಿ ಸ್ಪಷ್ಟವಾಗಿ ಕಾಣಬರುತ್ತದೆ (ಕಲ್ಯಾಣ ಚಾಳುಕ್ಯರ ಕಾಲ).

ಸ್ಥಳೀಯ ಸಂಸ್ಥೆಗಳು ನ್ಯಾಯತೀರ್ಮಾನವನ್ನು ಸಾಧ್ಯವಿದ್ದಷ್ಟು ಎರಡೂ ಪಕ್ಷಕ್ಕೆ ಮಾನ್ಯವಾಗುವಂತೆ ಮಾಡುತ್ತಿದ್ದರು. ದೇವಾಲಯಗಳಲ್ಲಿ ದಿವ್ಯವೂ ನಡೆಯುತ್ತಿತ್ತು. ಮಹಾಪರಾಧಗಳು (ಪಾತಕಗಳು) ಹಾಗೂ ಆಸ್ತಿಯ ಬಗೆಗಿನ ಭಾರೀ ದಾವೆಗಳಿದ್ದಲ್ಲಿ ಸರಕಾರೀ ಅಧಿಕಾರಿಗಳೂ ವಿಚಾರಣೆ ನಡೆಸುತ್ತಿದ್ದರು. ಅವರಲ್ಲಿ ಸೇನಾನಿಗಳು (ದಂಡನಾಯಕರು), ನಾಡಪೆರ್ಗಡೆ, ನಾಡಗೌಡ ಅಥವಾ ಮಂಡಲೇಶ್ವರರೂ ಸೇರಿದ್ದರು. ನ್ಯಾಯಾಧಿಕರಣ ಎಂಬ ಹೆಸರು ಶಾಸನಗಳಲ್ಲಿ ಕಾಣಬರುತ್ತದೆ. ಮರಾಠರು ರಾಜಾಧ್ಯಕ್ಷ ಎಂಬ ನ್ಯಾಯಾಧೀಶನನ್ನು ನೇಮಿಸಿದ್ದರು. ಆದಿಲ್‌ಶಾಹಿ ಮತ್ತು ಮುಘಲ್ ಆಡಳಿತದಲ್ಲಿ ಖಾಜಿ ಎಂಬ ನ್ಯಾಯಾಧಿಕಾರಿಯಿದ್ದನು. ಸ್ವತಃ ರಾಜನ ಮಂತ್ರಿ ಇಲ್ಲವೆ ರಾಜನೇ ನ್ಯಾಯ ತೀರ್ಮಾನ ನೀಡಿದ ಪ್ರಕರಣಗಳು ಇಲ್ಲದೇ ಇಲ್ಲ. ಅಬ್ಬಲೂರು ಶಾಸನದಲ್ಲಿ ರಾಜ ಬಿಜ್ಜಳನೇ ನ್ಯಾಯ ನೀಡಿದ ವಿವರವಿದೆ. ಲಕ್ಷ್ಮೇಶ್ವರದ ಶೈವರಿಗೂ ಜೈನರಿಗೂ ಆದ ವ್ಯಾಜ್ಯವೊಂದನ್ನು ಹಂಪಿಯಿಂದ ರಾಜಪುರೋಹಿತನು ಬಂದು ಜೈನರ ಪರ ತೀರ್ಮಾನಿಸಿದ ಪ್ರಕರಣವಿದೆ. (1538)

ಕಲ್ಯಾಣದ ಚಾಳುಕ್ಯರ ಆಸ್ಥಾನದಲ್ಲಿ ವಿಜ್ಞಾನೇಶ್ವರನು ರಚಿಸಿದ್ದ 'ಮಿತಾಕ್ಷರ' ಹಿಂದುಗಳಿಗೆ ಅವರ ಕೌಟುಂಬಿಕ ವ್ಯವಹಾರಗಳಾದ ಮದುವೆ, ದತ್ತಕ, ಆಸ್ತಿಯನ್ನು ಪರಂಪರಾಗತವಾಗಿ ಪಡೆಯುವ ಅಧಿಕಾರ, ಸ್ತ್ರೀಧನ, ವಿಧವೆಯ ಅಶನಾರ್ಥ ಮುಂತಾದ ಪ್ರಶ್ನೆಗಳಿಗೆ

ಮಾರ್ಗದರ್ಶಕವಾಗಿದ್ದು ಆಧುನಿಕ ಹಿಂದೂಕೋಡ್‌ನಲ್ಲೂ ಅದರ ಬಹಳಷ್ಟು ಸಂಗತಿಗಳು ಸಮಾವೇಶವಾಗಿವೆ.

ಬ್ರಿಟಿಷರ ಆಗಮನಾನಂತರ ಧಾರವಾಡ ಜಿಲ್ಲೆಯಲ್ಲಿನ ನ್ಯಾಯಾಡಳಿತದ ವ್ಯವಸ್ಥೆಯು, ಮದ್ರಾಸ್ ರಾಜ್ಯದಲ್ಲಿ ಇದ್ದಂತೆಯೇ ಇದ್ದಿತು. ಜಾನ್ ಡಂಕನ್ ಎಂಬುವವರು ವ್ಯವಸ್ಥೆಗೊಳಿಸಿದ್ದ ನ್ಯಾಯಾಂಗ ವಿಧಾನವು 1799 ರಲ್ಲಿ, ಅನುಷ್ಠಾನದಲ್ಲಿದ್ದು, 1827 ರವರೆಗೂ ಜಾರಿಯಲ್ಲಿದ್ದಿತು. ಈ ವ್ಯವಸ್ಥೆಯಲ್ಲಿನ ವಿಧಾನ ಹೀಗಿದ್ದಿತು. ಪ್ರತೀ ಜಿಲ್ಲೆಯಲ್ಲಿ ಭಾರತೀಯರಿಗೆ ಸಂಬಂಧಪಟ್ಟ ದಾವೆಗಳನ್ನು (5000 ರೂ.ಗಳಿಗೆ ಮೇಲ್ಪಟ್ಟು) ತೀರ್ಮಾನಿಸುವವರು ನೇಟೀವ್ ಕಮೀಶನರ್ ಆಗಿದ್ದರು. ಸ್ಥಳೀಯ ಸರ್ಕಾರವು ನ್ಯಾಯಾಧೀಶರ ಸಂಖ್ಯೆ ಹಾಗೂ ಅವರ ಅಧಿಕಾರದ ಸರಹದ್ದನ್ನು ಬದಲಾಯಿಸುವ ಹಕ್ಕನ್ನು ಹೊಂದಿದ್ದಿತು. ಸೀನಿಯರ್ ಅಸಿಸ್ಟಂಟ್ ನ್ಯಾಯಾಧೀಶರು ಐದು ಸಾವಿರ ರೂ.ವರೆಗಿನ ಮೌಲ್ಯದ ದಾವೆಯನ್ನು ಸ್ವೀಕರಿಸಬಹುದಿತ್ತು. ವಿಶೇಷ ಅಧಿಕಾರದಿಂದ ಈ ಮೌಲ್ಯವನ್ನು 10,000 ರೂ.ಗೆ ಏರಿಸಬಹುದಿತ್ತು. ಜೂನಿಯರ್ ಅಸಿಸ್ಟಂಟ್ ನ್ಯಾಯಾಧೀಶರು 500 ರೂ.ವರೆಗಿನ ಮೌಲ್ಯದ ದಾವೆಗಳನ್ನು ಸ್ವೀಕರಿಸಬಹುದಾಗಿತ್ತು. ಮಿತಿ ರಹಿತವಾಗಿ ಎಲ್ಲ ಸಿವಿಲ್ ದಾವೆಗಳನ್ನು ಡಿಸ್ಟ್ರಿಕ್ಟ್ ದಿವಾನಿ ಅದಾಲತ್ ದಲ್ಲಿ ತೀರ್ಮಾನಿಸಲಾಗುತ್ತಿತ್ತು ಮತ್ತು ಈ ಅದಾಲತ್‌ಗೆ ನೇಟೀವ್ ಕಮೀಶನರ್ ಮತ್ತು ಜೂನಿಯರ್ ಅಸಿಸ್ಟಂಟ್ ನ್ಯಾಯಾಧೀಶರ ತೀರ್ಪಿನ ಮೇಲೆ ಮೇಲ್ಮನವಿ ಮಾಡುವ ಹಕ್ಕಿದ್ದಿತು. ಸಾದರ್ ದೀವಾನಿ ಅದಾಲತ್‌ನಲ್ಲಿ 3-4 ನ್ಯಾಯಾಧೀಶರಿದ್ದು, ಮೇಲ್ಮನವಿ, ಮರುಪರಿಶೀಲನೆಗಳಿಗೆ ಪ್ರಮುಖ ನ್ಯಾಯಾಲಯವಾಗಿತ್ತು.

ಜನರಲ್ ಮನ್ರೋ ಫೆಬ್ರವರಿ, 1818 ರಲ್ಲಿ ಹೊರಡಿಸಿದ ಆಜ್ಞೆಯಂತೆ ಧಾರವಾಡದಲ್ಲಿ (ಆಗ ದಕ್ಷಿಣ ಮರಾಠಾ ದೋಆಬ್ ಎಂದು ಕರೆಯುತ್ತಿದ್ದರು) ಸಿವಿಲ್ ಆಡಳಿತವನ್ನು ಜಾರಿಗೆ ತಂದರು. ಪ್ರಿನ್ಸಿಪಾಲ್ ಕಲೆಕ್ಟರ್ ಮತ್ತು ಪೊಲಿಟಿಕಲ್ ಏಜೆಂಟ್ ಎಂಬ ಅಧಿಕಾರಿ ಜಿಲ್ಲೆಯ ನ್ಯಾಯಾಡಳಿತ, ಪೊಲೀಸ್ ಆಡಳಿತ ಮತ್ತು ಕಂದಾಯ ಆಡಳಿತವನ್ನು ನಡೆಸುತ್ತಿದ್ದರು. ಈ ದಕ್ಷಿಣ ಮರಾಠಾ ದೋಆಬ್‌ನ್ನು 21 ಉಪ ವಿಭಾಗಗಳನ್ನಾಗಿ ವಿಂಗಡಿಸಿ, ಪ್ರತಿ ವಿಭಾಗದಲ್ಲಿ ಎರಡು ಅಥವಾ ಮೂರು ಕಿಲ್ಲೆದಾರ ಅಥವಾ ಗ್ರಾಮೀಣ ಗುಮಾಸ್ತರ ನೆರವು ಹೊಂದಿದ ಒಬ್ಬ ಮಾಮಲತೇದಾರರು ಇದ್ದರು. ಸ್ಥಳೀಯ ನ್ಯಾಯಿಕ ಕಂದಾಯ ಮತ್ತು ಪೋಲೀಸ್ ಆಡಳಿತವನ್ನು ಇವರು ನಡೆಸುತ್ತಿದ್ದರು. ಈ ಜಿಲ್ಲೆಯಲ್ಲಿ ಈಗಿನ ಬೆಳಗಾಂವಿ, ಬಿಜಾಪುರ, ಸೊಲ್ಲಾಪುರದ ಭಾಗಗಳೂ ಇದ್ದವು. ಬ್ರಿಟಿಷ್ ಆಡಳಿತ ಪ್ರಾರಂಭವಾದ ದಿನಗಳಲ್ಲಿ ಸಿವಿಲ್ ವ್ಯಾಜ್ಯಗಳನ್ನು ಗ್ರಾಮಾಧಿಕಾರಿಗಳು ತೀರ್ಮಾನಿಸುತ್ತಿದ್ದರು. ಅತಿ ಮುಖ್ಯವಾದ ದಾವೆಗಳನ್ನು ಮಾಮಲತೇದಾರರು ತೀರ್ಮಾನಿಸುತ್ತಿದ್ದರು. ಅತಿ ಹೆಚ್ಚಿನ ಮೌಲ್ಯವು ಅಡಕವಾಗಿ ಇದ್ದ ದಾವೆಗಳನ್ನು ಕಲೆಕ್ಟರ್ ರವರ ಮುಂದೆ ಇಡಲಾಗುತ್ತಿತ್ತು. ಕಲೆಕ್ಟರ್ (ಜಿಲ್ಲಾಧಿಕಾರಿ) ಅವರು ಅವುಗಳನ್ನು ಪಂಚಾಯತಿಗಳಿಗೆ ತೀರ್ಮಾನಿಸಲು ಆದೇಶ ನೀಡುತ್ತಿದ್ದರು. 1820-21ರ ವೇಳೆಗೆ ಒಬ್ಬ ಪ್ರತ್ಯೇಕ ಅದಾಲತ್ ಪೇಷ್ಕಾರ್ ಎಂಬ ನ್ಯಾಯಾಧಿಕಾರಿಯನ್ನು ಪ್ರತೀ ಉಪವಿಭಾಗಕ್ಕೆ ನೇಮಿಸಲಾಯಿತು. ಕೆಲವು ವರ್ಷಗಳಲ್ಲಿ ಈ ಹುದ್ದೆಯನ್ನು ತೆಗೆದು, ಮುನ್ಸೀಫರನ್ನು ನೇಮಕ ಮಾಡಲಾಯಿತು. ಈ ಮುನ್ಸಿಫರು ಬೊಂಬಾಯಿ ಪ್ರೆಸಿಡೆನ್ಸಿಯ 1827 ರ ನಿಯಮಾವಳಿಗಳನ್ನು ಜಾರಿಗೆ ತಂದರು. ಪ್ರಧಾನ ಕಲೆಕ್ಟರರವರಿಗೆ, ಜುಡಿಶಿಯಲ್ ಅಸಿಸ್ಟಂಟ್‌ರವರು 'ರಿಜಿಸ್ಟ್ರಾರ್' ಎಂಬ ಪದನಾಮವನ್ನು ಹೊಂದಿ, ಸಹಾಯ ಮಾಡುತ್ತಿದ್ದರು. ಬಿಜಾಪುರ, ಬೆಳಗಾವಿ, ಸೊಲ್ಲಾಪುರದ ಉಪವಿಭಾಗಗಳು ಬೇರೆ ಬೇರೆ ಕಾಲದಲ್ಲಿ ಪ್ರತ್ಯೇಕವಾಗಿ 1846 ರಲ್ಲಿ ಧಾರವಾಡ ಜಿಲ್ಲೆಯಲ್ಲಿ 8 ಉಪವಿಭಾಗ (ತಾಲೂಕು)ಗಳಿದ್ದವು. ಅವುಗಳೆಂದರೆ - ಬಂಕಾಪುರ, ಡಂಬಳ, ಧಾರವಾಡ, ಹಾನಗಲ್ಲು, ಹುಬ್ಬಳ್ಳಿ, ಕೋಡ, ನವಲಗುಂದ ಮತ್ತು ರಾಣೆಬೆನ್ನೂರು. ಜಿಲ್ಲಾ ನ್ಯಾಯಾಧೀಶರ (ಜಡ್ಜ್) ನ್ಯಾಯಾಲಯವು ಧಾರವಾಡದಲ್ಲಿದ್ದು ಬೆಳಗಾವಿ ವಿಭಾಗವು ಸೇರಿದಂತೆ ಧಾರವಾಡ ಜಿಲ್ಲೆಯು ಸಂಪೂರ್ಣವಾಗಿ ಈ ನ್ಯಾಯಾಲಯದ ಅಧೀನದಲ್ಲಿ ಇದ್ದಿತು. ಒಬ್ಬ ಸಹಾಯಕ ನ್ಯಾಯಾಧೀಶರು ಧಾರವಾಡದಲ್ಲಿ ಇದ್ದರು. ಪ್ರಧಾನ 'ಸಾದರ ಅಮೀನ್'ರವರ ನ್ಯಾಯಾಲಯವು ಧಾರವಾಡದಲ್ಲಿ ಇದ್ದು ಬೆಳಗಾವಿಯ ಕೆಲವು ಗ್ರಾಮಗಳೂ ಸೇರಿದಂತೆ ಇಡೀ ಧಾರವಾಡ ಜಿಲ್ಲೆ ಈ ನ್ಯಾಯಾಲಯದ ಸರಹದ್ದಾಗಿತ್ತು. ಹುಬ್ಬಳ್ಳಿಯ 'ಸಾದರ ಅಮೀನ್'ರವರ ನ್ಯಾಯಾಲಯದ ವ್ಯಾಪ್ತಿ, ಹುಬ್ಬಳ್ಳಿ ಉಪವಿಭಾಗ ಮತ್ತು ಬಂಕಾಪುರ, ನವಲಗುಂದಗಳ ಕೆಲವು ಗ್ರಾಮಗಳಾಗಿತ್ತು. ಹಾವೇರಿಯ ಮುನ್ಸೀಫರ ನ್ಯಾಯಾಲಯ ಹಾವೇರಿಯಲ್ಲಿದ್ದು, ಬಂಕಾಪುರದ ಕೆಲವು ಗ್ರಾಮಗಳು ಸೇರಿದಂತೆ, ಹಾನಗಲ್ಲು, ಕೋಡ ಮತ್ತು ರಾಣೆಬೆನ್ನೂರು ವಿಭಾಗಗಳವರೆಗೂ ವ್ಯಾಪ್ತಿ ಹೊಂದಿತ್ತು. 1869 ರಲ್ಲಿ ಬೆಳಗಾವಿ ವಿಭಾಗವನ್ನು ಪ್ರತ್ಯೇಕಿಸಿ ಧಾರವಾಡ ಜಿಲ್ಲೆಯ ಅಧೀನ ನ್ಯಾಯಾಲಯಗಳನ್ನು ಮರು ವಿಂಗಡಣೆ ಮಾಡಲಾಯಿತು. ಧಾರವಾಡದ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯವು ಧಾರವಾಡದಲ್ಲಿದ್ದು ಸ್ಥಳೀಯ ವ್ಯಾಪ್ತಿಯು ಜಿಲ್ಲೆಯ 11 ಉಪವಿಭಾಗ (ತಾಲೂಕು)ಗಳನ್ನು ಒಳಗೊಂಡಿತ್ತು. ಧಾರವಾಡದಲ್ಲಿ ಪ್ರಥಮ ದರ್ಜೆ ಉಪ ನ್ಯಾಯಾಧೀಶರ ವ್ಯಾಪ್ತಿ, ಧಾರವಾಡ, ಹುಬ್ಬಳ್ಳಿ, ಬಂಕಾಪುರ ಮತ್ತು

ಕಲಘಟಗಿ ಉಪವಿಭಾಗಗಳವರೆಗೂ ಇದ್ದಿತು. ಹಾವೇರಿಯ ದ್ವಿತೀಯ ದರ್ಜೆ ಉಪನ್ಯಾಯಾಧೀಶರ ಅಧಿಕಾರ ವ್ಯಾಪ್ತಿಯು ಕರಜಗಿ, ಹಾನಗಲ್, ಕೋಡ ಮತ್ತು ರಾಣೆಬೆನ್ನೂರ ಉಪವಿಭಾಗಗಳವರೆಗೂ ಇದ್ದಿತು. ಹಾಗೆಯೇ ಗದಗಿನ ಉಪನ್ಯಾಯಾಧೀಶರ ಅಧಿಕಾರ ವ್ಯಾಪ್ತಿಯು ಗದಗ, ನರಗುಂದ ಮತ್ತು ರೋಣ ಉಪವಿಭಾಗಗಳವರೆಗೂ ಇದ್ದಿತು. 1870 ರ ವೇಳೆಗೆ ಜಿಲ್ಲೆಯಲ್ಲಿ ಒಟ್ಟು ನಾಲ್ಕು ನ್ಯಾಯಾಲಯಗಳಿದ್ದು, ಅವುಗಳಲ್ಲಿ ಒಂದು ಜಿಲ್ಲಾ ಮತ್ತು ಮೂರು ಅಧೀನ ನ್ಯಾಯಾಲಯಗಳಾಗಿದ್ದವು ಮತ್ತು ಆ ಸಾಲಿನಲ್ಲಿ ಒಟ್ಟು ತೀರ್ಮಾನವಾದ ದಾವೆಗಳು 2,303 ಹಾಗೂ ದಾವೆ ತೀರ್ಮಾನಿಸಲು ತೆಗೆದುಕೊಂಡ ಸರಾಸರಿ ದಿನಗಳು 158. 1875 ರ ಹೊತ್ತಿಗೆ 5 ನ್ಯಾಯಾಲಯಗಳಾಗಿದ್ದು ಹುಬ್ಬಳ್ಳಿಯಲ್ಲಿ ಅಧೀನ ನ್ಯಾಯಾಲಯವು ಆರಂಭವಾಯಿತು. ಒಟ್ಟು ತೀರ್ಮಾನವಾದ ದಾವೆಗಳು 3,760 ಮತ್ತು ಪ್ರತೀ ದಾವೆ ತೀರ್ಮಾನಿಸಲು ತೆಗೆದುಕೊಂಡ ಸರಾಸರಿ ದಿನಗಳು 143. 1883 ರವರೆಗೂ ನ್ಯಾಯಾಲಯದ ಸಂಖ್ಯೆಯಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ. 1870 ರಿಂದ 1882 ರವರೆಗೆ, ತೀರ್ಮಾನವಾದ ವಾರ್ಷಿಕ ಸರಾಸರಿ ದಾವೆಗಳು 3,395 - ಅವುಗಳ ವಿವರಗಳು ಹೀಗಿವೆ.

**ಕೋಷ್ಟಕ - 10.1**

**ಧಾರವಾಡ ನ್ಯಾಯಾಲಯದಲ್ಲಿ 1870 ರಿಂದ 1882 ರವರೆಗೆ ತೀರ್ಮಾನವಾದ ಸರಾಸರಿ ದಾವೆಗಳು**

| ವರ್ಷ | ದಾವೆಗಳು | ತೀರ್ಮಾನಗಳು | ಪ್ರತಿಶತ |
|---|---|---|---|
| 1870 | 2,303 | 1,531 | 66.4 |
| 1875 | 3,831 | 2,190 | 57.1 |
| 1880 | 3,332 | 1,876 | 56.3 |
| 1882 | 3,742 | 1,575 | 42.0 |

**ಕೋಷ್ಟಕ 10.2 : ಧಾರವಾಡ ಸಿವಿಲ್ ನ್ಯಾಯಾಲಯದಲ್ಲಿ 1870-1882 ರವರೆಗೆ ನಡೆದ ಕಾರ್ಯಚಟುವಟಿಕೆಗಳ ವಿವರ.**

| ವರ್ಷ | ದಾವೆಗಳು | ಸರಾಸರಿ ಮೌಲ್ಯ (ಪೌಂಡ್‌ಗಳಲ್ಲಿ) | ಪ್ರತಿವಾದಿ ಗೈರುಹಾಜರಿಯಲ್ಲಿ ಡಿಕ್ರಿ ಆದವು | ಪ್ರತಿವಾದಿ ಗೈರುಹಾಜರಿಯಲ್ಲಿ ಡಿಸ್‌ಮಿಸ್ ಆದವು | ಒಪ್ಪಿಗೆಯಾಗಿ ಡಿಕ್ರಿ ಆದವು | ಇತರೆ | ಒಟ್ಟು |
|---|---|---|---|---|---|---|---|
| 1870 | 2,303 | 21.3 | 1,531 | 17 | 62 | 179 | 1,789 |
| 1875 | 3,831 | 20.4 | 2,190 | 131 | 178 | 583 | 3,082 |
| 1880 | 3,332 | 15.6 | 1,876 | 266 | 133 | 485 | 2,760 |
| 1881 | 4,024 | 15.1 | 1,869 | 266 | 97 | 629 | 2,861 |
| 1882 | 3,742 | 14.7 | 1,575 | 105 | 138 | 799 | 2,617 |

**ಕೋಷ್ಟಕ 10.3**

| | ವಾದ ಮಾಡಿದ ದಾವೆಗಳು | | | | ಆಜ್ಞೆಗಳ ಕಾರ್ಯಾಚರಣೆ (ಎಕ್ಸಿಕ್ಯೂಷನ್) | | | |
|---|---|---|---|---|---|---|---|---|
| | ವಾದಿಯ | ಪ್ರತಿವಾದಿ | ಮಿಶ್ರಿತ | ಮೊತ್ತ | ಸಾಲಗಾರನ ದಸ್ತಗಿರಿ | ಡಿಕ್ರಿ ಪಡೆದವನಿಂದ ವಸೂಲಿ | ಆಸ್ತಿಯ ಮಾರಾಟ ಸ್ಥಿರ | ಚರ |
| 1870 | 313 | 158 | 43 | 514 | 112 | 113 | 752 | 150 |
| 1875 | 486 | 263 | - | 749 | 23 | 397 | 951 | 168 |
| 1880 | 455 | 117 | - | 572 | 40 | 116 | 732 | 53 |
| 1881 | 900 | 263 | - | 1163 | 22 | 130 | 489 | 78 |
| 1882 | 778 | 347 | - | 1125 | 17 | 160 | 372 | 58 |

1884ರಲ್ಲಿ, 30ಕ್ರಿಮಿನಲ್ ಖಟ್ಲೆಗಳ ನ್ಯಾಯಾಧೀಶರುಗಳಿದ್ದರು. ಇವರಲ್ಲಿ ಏಳು ಮಂದಿ (ಜಿಲ್ಲಾ ಮ್ಯಾಜಿಸ್ಟ್ರೇಟ್‌ರೂ ಸೇರಿದಂತೆ) ಪ್ರಥಮದರ್ಜೆ ಮ್ಯಾಜಿಸ್ಟ್ರೇಟರು, 23 ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟರು ಇದ್ದರು. 1882 ರ ಹೊತ್ತಿಗೆ, ಒಬ್ಬ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರ ಸರಾಸರಿ ವ್ಯಾಪ್ತಿ ಸುಮಾರು 1,133 ಚದರ ಮೈಲಿ (2,900 ಚ.ಕಿ.ಮೀ) ಮತ್ತು 22,027 ಜನಸಂಖ್ಯೆ ಆಗಿದ್ದಿತು. ಉಳಿದ ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟರ ಸರಾಸರಿ ವ್ಯಾಪ್ತಿ 197 ಚದರ ಮೈಲಿ ಮತ್ತು (510 ಚ.ಕಿಮೀ) ಮತ್ತು 38,387 ಜನಸಂಖ್ಯೆ ಇದ್ದಿತು.

**ಸವಣೂರು ಸಂಸ್ಥಾನದ ನ್ಯಾಯಾಡಳಿತ :** ಸವಣೂರು ಸಂಸ್ಥಾನಕ್ಕೆ ಅದು ವಿಲೀನವಾಗುವವರೆಗೆ ತನ್ನದೇ ಆದ ನ್ಯಾಯಾಂಗ ವ್ಯವಸ್ಥೆ ಇತ್ತು. ಆಗಿನ ಬ್ರಿಟಿಷ್ ಪ್ರಾಂತ್ಯದ ಕಾನೂನು ಜಾರಿಯಲ್ಲಿತ್ತು. ದಿವಾಣಿ (ಸಿವಿಲ್) ಹಾಗೂ ಫೌಜದಾರಿ (ಕ್ರಿಮಿನಲ್) ನ್ಯಾಯಾಲಯಗಳು ಇದ್ದವು. ಇದಲ್ಲದೇ ಎರಡು ಮೇಲ್ಮನವಿ ನ್ಯಾಯಾಲಯಗಳಿದ್ದವು. ಇವುಗಳು ಉಚ್ಚ ನ್ಯಾಯಾಲಯಗಳಾಗಿದ್ದವು. ಮೊದಲನೇಯ ದರ್ಜೆ ದಿವಾಣಿ ನ್ಯಾಯಾಧೀಶರು, ಮೊದಲನೇ ದರ್ಜೆ ದಂಡಾಧಿಕಾರದ ನ್ಯಾಯಾಧೀಶರೂ ಆಗಿದ್ದರು. ಇಲ್ಲಿಯ ಉಚ್ಚ ನ್ಯಾಯಾಲಯವೇ ಮೇಲ್ಮನವಿಗೆ ಕೊನೆಯ ನ್ಯಾಯಾಲಯವಾಗಿತ್ತು. ಇದಕ್ಕೂ ಹಿಂದಿನ ನವಾಬರ ಕಾಲದಲ್ಲಿ ಧಾರವಾಡದಲ್ಲಿದ್ದ ಕಲೆಕ್ಟರ್‌ರವರು ರಾಜಕೀಯ ಕಾರ್ಯಭಾರಿಯಾಗಿ ನ್ಯಾಯಾಡಳಿತವನ್ನು ನಿರ್ವಹಿಸುತ್ತಿದ್ದರು. 1945 ರಲ್ಲಿ ಸವಣೂರು ಉಚ್ಚ ನ್ಯಾಯಾಲಯವು ಕೊಲ್ಹಾಪುರದ ಉಚ್ಚ ನ್ಯಾಯಾಲಯದೊಂದಿಗೆ ವಿಲೀನ ಹೊಂದಿತು.

1869 ರ ಸಿವಿಲ್ ಕೋರ್ಟ್ಸ್ ಆಕ್ಟ್‌ನಂತೆ ನ್ಯಾಯಾಲಯಗಳು ಈ ರೀತಿ ಇದ್ದವು: (1) ಡಿಸ್ಟ್ರಿಕ್ಟ್ ಜಡ್ಜ್ ಅಥವಾ ಜಿಲ್ಲಾ ನ್ಯಾಯಾಧೀಶ (ಪ್ರತಿ ಜಿಲ್ಲೆಗೆ), (2) ಪ್ರತಿ ಜಿಲ್ಲೆಗೆ ಜಿಲ್ಲಾ ನ್ಯಾಯಾಧೀಶ (ಡಿಸ್ಟ್ರಿಕ್ಟ್ ಜಜ್)ರಷ್ಟೇ ಅಧಿಕಾರವನ್ನು ಹೊಂದಿರುವ ಒಬ್ಬ ಜಂಟಿ ನ್ಯಾಯಾಧೀಶ, (3) ಒಬ್ಬ ಸಹಾಯಕ ಜಿಲ್ಲಾ ನ್ಯಾಯಾಧೀಶರು ಜಿಲ್ಲೆಯ ಪ್ರಧಾನ ಕಛೇರಿಯಲ್ಲಿ ಇದ್ದು 15,000 ರೂ. ಮೌಲ್ಯಕ್ಕಿಂತಲೂ ಅಥವಾ ಕಡಿಮೆ ಇರುವ ದಾವೆಗಳನ್ನು ಜಿಲ್ಲಾ ನ್ಯಾಯಾಧೀಶರು ದಾವೆಗಳನ್ನು ಹಂಚುವ ಬಗ್ಗೆ ಆದೇಶಿಸಿದಂತೆ ತೀರ್ಮಾನಿಸುತ್ತಿದ್ದರು. (4) ಸಿವಿಲ್ ನ್ಯಾಯಾಧೀಶರು (ಸೀನಿಯರ್ ಮತ್ತು ಜೂನಿಯರ್) ಹುದ್ದೆಯನ್ನು ಸೃಷ್ಟಿಸಿ, ದಾವೆಯ ಮೌಲ್ಯದ 10,000 ರೂ.ವರೆಗಿನ ಗರಿಷ್ಠ ಮಿತಿಯನ್ನು ನಿಗದಿಪಡಿಸಲಾಯಿತು. ಇವರ ತೀರ್ಪಿನ ಮೇಲಿನ ಮೇಲ್ಮನವಿಯನ್ನು ಜಿಲ್ಲಾ ನ್ಯಾಯಾಧೀಶರಿಗೆ ಮಾಡಬೇಕಾಗಿತ್ತು. ಈ ವ್ಯವಸ್ಥೆ 1.1.1956 ರ ವರೆಗೂ ಇದ್ದಿತು. ನೂತನ ಕರ್ನಾಟಕ ರಾಜ್ಯ ನಿರ್ಮಾಣವಾದ ಮೇಲೆ, 1951 ರ ಕರ್ನಾಟಕ ಸಿವಿಲ್ ಕೋರ್ಟ್ ಆಕ್ಟನ್ನು ಅನುಷ್ಠಾನಗೊಳಿಸಿ, ಈ ಕೆಳಕಂಡ ಕೋರ್ಟುಗಳು ಸ್ಥಾಪಿತವಾದವು. ಜಿಲ್ಲಾಮಟ್ಟದಲ್ಲಿ ಜಿಲ್ಲೆ ನ್ಯಾಯಾಲಯ, ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ತಾಲೂಕುಮಟ್ಟದಲ್ಲಿ ಮುನ್ಸೀಫ ನ್ಯಾಯಾಲಯ ಮತ್ತು ಪ್ರಥಮದರ್ಜೆ ನ್ಯಾಯ ದಂಡಾಧಿಕಾರಿ (ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟ್, ಫಸ್ಟ್‌ಕ್ಲಾಸ್) ಇವರುಗಳು ಕಾರ್ಯ ನಿರ್ವಹಿಸುತ್ತಿದ್ದರು. ಜಿಲ್ಲೆಯಲ್ಲಿ ಜಿಲ್ಲಾ ನ್ಯಾಯಾಲಯವೇ ಉಚ್ಚ ನ್ಯಾಯಾಲಯವಾಗಿದ್ದಿತು. ಜಿಲ್ಲಾ ನ್ಯಾಯಾಧೀಶರು ಜಿಲ್ಲೆಯಲ್ಲಿನ ಎಲ್ಲಾ ಸಿವಿಲ್ ನ್ಯಾಯಾಲಯಗಳ ಮತ್ತು ಅಲ್ಲಿನ ಸಿಬ್ಬಂದಿಗಳ ಮೇಲೆ ನಿಯಂತ್ರಣವನ್ನು ಹೊಂದಿದ್ದರು. ಧಾರವಾಡದಲ್ಲಿ ಮತ್ತೊಬ್ಬ ಸಹಾಯಕ ನ್ಯಾಯಾಧೀಶರಿದ್ದರು. ಇದಲ್ಲದೆ, ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ ಸೀನಿಯರ್ ಡಿವಿಜನ್ ಸಿವಿಲ್ ನ್ಯಾಯಾಧೀಶ ಮತ್ತು ಜೂನಿಯರ್

ಡಿವಿಜನ್ ಸಿವಿಲ್ ನ್ಯಾಯಾಧೀಶರುಗಳು ಇದ್ದರು. ಮತ್ತು ಒಂದು ಜೂನಿಯರ್ ಡಿವಿಜನ್ ಸಿವಿಲ್ ಜಜ್ಜರು. ಗದಗ, ಹಾವೇರಿ, ರಾಣೆಬೆನ್ನೂರು, ಕುಂದಗೋಳ, ಲಕ್ಷ್ಮೇಶ್ವರ ಮತ್ತು ಸವಣೂರಿನಲ್ಲಿ ಜೂನಿಯರ್ ಡಿವಿಜನಲ್ ಸಿವಿಲ್ ನ್ಯಾಯಾಧೀಶರು ಇದ್ದರು. ಲಕ್ಷ್ಮೇಶ್ವರ ಮತ್ತು ಸವಣೂರಿನ ನ್ಯಾಯಾಲಯಗಳಿಗೆ ಜಂಟಿಯಾಗಿ, ಒಬ್ಬ ಜೂನಿಯರ್ ಡಿವಿಜನ್ ಸಿವಿಲ್ ಜಜ್ಜರು ನ್ಯಾಯಾಧೀಶರಾಗಿದ್ದರು.

ಜಿಲ್ಲೆಯಲ್ಲಿನ ಕ್ರಿಮಿನಲ್ ದಾವೆಗಳನ್ನು ಸೆಶನ್ಸ್ ನ್ಯಾಯಾಧೀಶರು ತೀರ್ಮಾನಿಸುತ್ತಿದ್ದರು. ಇದಲ್ಲದೆ ಸಹಾಯಕ ಸೆಶನ್ಸ್ ನ್ಯಾಯಾಧೀಶರು, ಅಧಿಕ ಸೆಶನ್ಸ್ ನ್ಯಾಯಾಧೀಶರು ಅಧಿಕಾರವನ್ನು ಹೊಂದಿದ್ದು, ನ್ಯಾಯಾಲಯದ ಕಾರ್ಯವನ್ನು ನೋಡಿಕೊಳ್ಳುತ್ತಿದ್ದರು. ಸೆಶನ್ಸ್ ನ್ಯಾಯಾಧೀಶರು ಮತ್ತು ಸಹಾಯಕ ಸೆಶನ್ಸ್ ನ್ಯಾಯಾಧೀಶರು ತೀರ್ಪಿತ್ತ ಮರಣದಂಡನೆಯನ್ನು ಹೈಕೋರ್ಟು ಸಮರ್ಥಿಸಬೇಕಾಗಿತ್ತು. ಸಹಾಯಕ ಸೆಶನ್ಸ್ ನ್ಯಾಯಾಧೀಶರು ಮರಣದಂಡನೆ ಮತ್ತು 7 ವರ್ಷಕ್ಕೂ ಮೀರಿದ ಶಿಕ್ಷೆ ಇವುಗಳನ್ನು ಹೊರತು ಉಳಿದ ಶಿಕ್ಷೆಗಳನ್ನು ವಿಧಿಸುವ ಹಕ್ಕನ್ನು ಹೊಂದಿದ್ದರು.

ಧಾರವಾಡ ಜಿಲ್ಲೆಯಲ್ಲಿ ಅನುಷ್ಠಾನದಲ್ಲಿದ್ದ 'ದಿ ಬಾಂಬೆ ಸೆಪರೇಶನ್ ಆಫ್ ಜುಡಿಶಿಯಲ್ ಅಂಡ್ ಎಕ್ಸಿಕ್ಯೂಟಿವ್ ಫಂಕ್ಷನ್ಸ್ ಆಕ್ಟ್' ನಂತೆ ನ್ಯಾಯಿಕ ವಿಧಾನವನ್ನು ಎರಡು ವಿಭಾಗವಾಗಿ ವಿಂಗಡಿಸಿದ್ದಾರೆ. (1) ನ್ಯಾಯಿಕ ದಂಡಾಧಿಕಾರಿ (ಜುಡಿಶಿಯಲ್ ಮ್ಯಾಜಿಸ್ಟ್ರೇಟ), (ಅ) ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು, (ಆ) ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರು, (ಇ) ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟರು, (ಈ) ತೃತೀಯ ದರ್ಜೆ ಮ್ಯಾಜಿಸ್ಟ್ರೇಟರು ಹಾಗೂ (ಉ) ವಿಶೇಷ ನ್ಯಾಯಿಕ ಮ್ಯಾಜಿಸ್ಟ್ರೇಟರು; (2) ಕಾರ್ಯಕಾರಿ ದಂಡಾಧಿಕಾರಿಗಳು: (ಅ) ಜಿಲ್ಲಾ ದಂಡಾಧಿಕಾರಿ (ಆ) ಉಪವಿಭಾಗ ದಂಡಾಧಿಕಾರಿ (ಇ) ತಾಲೂಕು ದಂಡಾಧಿಕಾರಿ (ಈ) ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು (ಉ) ವಿಶೇಷ ಕಾರ್ಯಕಾರಿ ದಂಡಾಧಿಕಾರಿಗಳು.

1953 ರಲ್ಲಿ ಧಾರವಾಡದಲ್ಲಿ 10 ನಿವಾಸೀ (ರೆಸಿಡೆಂಟ್) ಮ್ಯಾಜಿಸ್ಟ್ರೇಟ್‌ಗಳಿದ್ದರು. ಧಾರವಾಡ - 2, ಹುಬ್ಬಳ್ಳಿ - 3, ಗದಗ - 3, ಹಾವೇರಿ - 1, ರಾಣೆಬೆನ್ನೂರು - 1. ಹುಬ್ಬಳ್ಳಿಯ ನಿವಾಸೀ ಮ್ಯಾಜಿಸ್ಟ್ರೇಟರು ತಿಂಗಳಲ್ಲಿ 3 ದಿನ ಕಲಘಟಗಿಯಲ್ಲಿ ನ್ಯಾಯಾಲಯವನ್ನು ನಡೆಸುತ್ತಿದ್ದರು. ಇದೇ ರೀತಿ ಹುಬ್ಬಳ್ಳಿಯ ದ್ವಿತೀಯ ಅಧಿಕ ನಿವಾಸೀ ಮ್ಯಾಜಿಸ್ಟ್ರೇಟರವರು ನವಲಗುಂದದಲ್ಲಿ ತಿಂಗಳಿಗೆ 14 ದಿನ ನ್ಯಾಯಾಲಯ ನಡೆಸುತ್ತಿದ್ದರು. ಗದಗಿನ ನಿವಾಸೀ ಮ್ಯಾಜಿಸ್ಟ್ರೇಟರು ರೋಣದಲ್ಲಿ ತಿಂಗಳಿನ 14 ದಿನ ನ್ಯಾಯಾಲಯ ನಡೆಸುತ್ತಿದ್ದರು. ಹಾಗೆಯೇ ಗದಗಿನ ದ್ವಿತೀಯ ನಿವಾಸೀ ಮ್ಯಾಜಿಸ್ಟ್ರೇಟರು, ಮುಂಡರಗಿಯಲ್ಲಿ ತಿಂಗಳಿನ ಎಂಟು ದಿನ ನ್ಯಾಯಾಲಯ ನಡೆಸುತ್ತಿದ್ದರು ಮತ್ತು ಹಾವೇರಿಯ ನಿವಾಸೀ ಮ್ಯಾಜಿಸ್ಟ್ರೇಟರು ತಿಂಗಳಿನ 14 ದಿನ ಹಾನಗಲ್‌ನಲ್ಲಿ ನ್ಯಾಯಾಲಯ ನಡೆಸುತ್ತಿದ್ದರು. ರಾಣೆಬೆನ್ನೂರಿನ ನಿವಾಸಿ ಮ್ಯಾಜಿಸ್ಟ್ರೇಟರೂ ಹಿರೇಕೆರೂರಿನಲ್ಲಿ ತಿಂಗಳಿನ 14 ದಿನ ನ್ಯಾಯಾಲಯ ನಡೆಸುತ್ತಿದ್ದರು. ರಾಣೆಬೆನ್ನೂರಿನ ನಿವಾಸಿ ಮ್ಯಾಜಿಸ್ಟ್ರೇಟರೂ ಹಿರೇಕೆರೂರಿನಲ್ಲಿ ತಿಂಗಳಿನ 14 ದಿನ ನ್ಯಾಯಾಲಯ ನಡೆಸುತ್ತಿದ್ದರು. ಸವಣೂರು ಮತ್ತು ಲಕ್ಷ್ಮೇಶ್ವರದ ಸಿವಿಲ್ ಕೋರ್ಟುಗಳಿಗೆ ಒಬ್ಬರೇ ನ್ಯಾಯಾಧೀಶರಿದ್ದು 14 ದಿನಗಳು ಲಕ್ಷ್ಮೇಶ್ವರದಲ್ಲೂ ಉಳಿದ ದಿನಗಳೂ ಸವಣೂರಿನಲ್ಲೂ ನ್ಯಾಯಾಲಯ ನಡೆಸುತ್ತಿದ್ದರು.

ಇವರಲ್ಲದೆ ಜಿಲ್ಲೆಯಲ್ಲಿ ನ್ಯಾಯಶಾಸ್ತ್ರ ಅಧಿಕಾರಿಗಳು ಈ ಕೆಳಗಿನಂತೆ ಇದ್ದರು (1953). ಜಿಲ್ಲಾ ಸರ್ಕಾರಿ ನ್ಯಾಯವಾದಿ (ಪಬ್ಲಿಕ್ ಪ್ರಾಸಿಕ್ಯೂಟರ್), ಸಹಾಯಕ ಸರ್ಕಾರಿ ನ್ಯಾಯವಾದಿ, ಪ್ರಥಮ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ಸ್, ದ್ವಿತೀಯ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್, ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ (ಇಬ್ಬರು) ಗೌರವ ಸಹಾಯಕರು, ಉಪ ಸರ್ಕಾರಿ ಪ್ಲೀಡರ್‌ಗಳು (ಹಾವೇರಿ, ಹುಬ್ಬಳ್ಳಿ, ಕುಂದಗೋಳ, ಲಕ್ಷ್ಮೇಶ್ವರ, ರಾಣೆಬೆನ್ನೂರು, ಗದಗ, ಸವಣೂರು) ಇದ್ದರು.

1956 ರಿಂದ 1994 ರವರೆಗೂ ನ್ಯಾಯಾಲಯಗಳ ವ್ಯವಸ್ಥೆಯಲ್ಲಿ ಹೆಚ್ಚಿನ ಬದಲಾವಣೆ ಇರಲಿಲ್ಲ. 1994 ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಇದ್ದ ನ್ಯಾಯಾಲಯಗಳ ಪಟ್ಟಿಯನ್ನು ಇಲ್ಲಿ ಕೊಡಲಾಗಿದೆ. ಜಿಲ್ಲೆಯಲ್ಲಿ ಒಟ್ಟು 38 ನ್ಯಾಯಾಲಯಗಳಿದ್ದವು.

ಧಾರವಾಡ ಜಿಲ್ಲೆಯಲ್ಲಿ 1994ರಲ್ಲಿದ್ದ ಒಟ್ಟು ನ್ಯಾಯಾಲಯಗಳ ಸಂಖ್ಯೆ ಮತ್ತು ಎಲ್ಲಾ ನ್ಯಾಯಾಲಯಗಳ ಪದನಾಮ ಹೀಗಿದೆ.

1) ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲಯ, ಧಾರವಾಡ. (ಈಗ ಹುಬ್ಬಳ್ಳಿ)

2) ಒಂದನೇಯ ಅಧಿಕ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ, ಧಾರವಾಡ. (ಈಗ ಹುಬ್ಬಳ್ಳಿ.)

3) ಎರಡನೇಯ ಅಧಿಕ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ, ಧಾರವಾಡ.

4) ಮೂರನೇಯ ಅಧಿಕ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ, ಧಾರವಾಡ.

5) ಪ್ರಧಾನ ದಿವಾಣಿ ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಧಾರವಾಡ.

6) ಒಂದನೇಯ ಅಧಿಕ ದಿವಾಣಿ ನ್ಯಾಯಾಲಯ, ಧಾರವಾಡ.

7) ಎರಡನೇಯ ಅಧಿಕ ದಿವಾಣಿ ನ್ಯಾಯಾಲಯ, ಧಾರವಾಡ.

8) ಪ್ರಧಾನ ದಿವಾಣಿ ನ್ಯಾಯಾಲಯ, ಹುಬ್ಬಳ್ಳಿ.

9) ಒಂದನೇಯ ಹೆಚ್ಚುವರಿ ದಿವಾಣಿ ನ್ಯಾಯಾಲಯ, ಹುಬ್ಬಳ್ಳಿ.

10) ದಿವಾಣಿ ನ್ಯಾಯಾಲಯ, ಗದಗ.

11) ದಿವಾಣಿ ನ್ಯಾಯಾಲಯ, ಹಾವೇರಿ.

12) ದಿವಾಣಿ ಹಾಗೂ ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಣೆಬೆನ್ನೂರು.

13) ಪ್ರಧಾನ ಮುನ್ಸೀಫರ ನ್ಯಾಯಾಲಯ, ಧಾರವಾಡ.

14) ಅಧಿಕ ಮುನ್ಸೀಫರ ನ್ಯಾಯಾಲಯ, ಧಾರವಾಡ. (ಒಂದನೇಯ)

15) ಎರಡನೇಯ ಹೆಚ್ಚುವರಿ ಮುನ್ಸೀಫರ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ಎರಡನೇಯ ನ್ಯಾಯಾಲಯ, ಧಾರವಾಡ.

16) ಪ್ರಧಾನ ಮುನ್ಸೀಫರ ನ್ಯಾಯಾಲಯ, ಹುಬ್ಬಳ್ಳಿ.

17) ಒಂದನೇಯ ಅಧಿಕ ಮುನ್ಸೀಫರ ನ್ಯಾಯಾಲಯ, ಹುಬ್ಬಳ್ಳಿ.

18) ಎರಡನೇಯ ಅಧಿಕ ಮುನ್ಸೀಫ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ಮೂರನೇಯ ನ್ಯಾಯಾಲಯ, ಹುಬ್ಬಳ್ಳಿ.

19) ಮೂರನೇಯ ಅಧಿಕ ಮುನ್ಸಿಫರ ನ್ಯಾಯಾಲಯ, ಹುಬ್ಬಳ್ಳಿ.

20) ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ಒಂದನೇಯ ನ್ಯಾಯಾಲಯ, ಹುಬ್ಬಳ್ಳಿ.

21) ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ಎರಡನೇಯ ನ್ಯಾಯಾಲಯ, ಹುಬ್ಬಳ್ಳಿ.

22) ಮುನ್ಸೀಫ್ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕುಂದಗೋಳ.

23) ಮುನ್ಸೀಫ್ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸವಣೂರ.

24) ಮುನ್ಸೀಫ್ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಲಕ್ಷ್ಮೇಶ್ವರ.

25) ಮುನ್ಸೀಫ್ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶಿಗ್ಗಾಂವಿ.

26) ಮುನ್ಸೀಫ್ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.

27) ಪ್ರದಾನ ಮುನ್ಸೀಫ ವ ಒಂದನೇಯ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಣೆಬೆನ್ನೂರ.

28) ಒಂದನೇಯ ಅಧಿಕ ಮುನ್ಸೀಫ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಣೆಬೆನ್ನೂರ.

29) ಮುನ್ಸೀಫ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬ್ಯಾಡಗಿ.

30) ಮುನ್ಸೀಫ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಿರೇಕೆರೂರು.

31) ಮುನ್ಸೀಫ್ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾನಗಲ್ಲ.

32) ಪ್ರಧಾನ ಮುನ್ಸೀಫರ ನ್ಯಾಯಾಲಯ, ಗದಗ.

33) ಒಂದನೇಯ ಅಧಿಕ ಮುನ್ಸೀಫ್ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ 1 ನೇ ನ್ಯಾಯಾಲಯ, ಗದಗ.

34) ಎರಡನೇಯ ಅಧಿಕ ಮುನ್ಸೀಫ್ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ಎರಡನೇಯ ನ್ಯಾಯಾಲಯ, ಗದಗ.

35) ಮುನ್ಸೀಫ್ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನರಗುಂದ.

36) ಮುನ್ಸೀಫ್ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನವಲಗುಂದ.

37) ಮುನ್ಸೀಫ್ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರೋಣ.

38) ಮುನ್ಸೀಫ್ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಲಘಟಗಿ.

ಒಟ್ಟಿನಲ್ಲಿ ಹೇಳುವುದಾದರೆ ಜಿಲ್ಲೆಯಲ್ಲಿ 1994 ರಲ್ಲಿ ಇದ್ದ ಒಟ್ಟು ಜಿಲ್ಲಾ ವ ಸತ್ರ ನ್ಯಾಯಾಲಯಗಳು 4 ; ಒಟ್ಟು ದಿವಾಣಿ ನ್ಯಾಯಾಲಯಗಳು 8 ; ಒಟ್ಟು ಪೂರ್ಣ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯಗಳು 2 ; ಒಟ್ಟು ಪೂರ್ಣ ಮುನ್ಸೀಫ ನ್ಯಾಯಾಲಯಗಳು 6 ; ಒಟ್ಟು ಮುನ್ಸೀಫ ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯಗಳು 18 ; ಒಟ್ಟು ನ್ಯಾಯಾಲಯಗಳು 38.

(ರೇಲ್ವೆ, ಕಾರ್ಮಿಕ, ಔದ್ಯಮಿಕ ನ್ಯಾಯಾಧೀಕರಣಗಳನ್ನು ಹೊರತುಪಡಿಸಿ)

**ಕೋಷ್ಟಕ 10.4 : 1970-71 ರಿಂದ 1991-92 ರವರೆಗೆ ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಜಡ್ಜರ ನ್ಯಾಯಾಲಯದಲ್ಲಿ ನಡೆದ ದಾವೆಗಳ ವಿವರ.**

| ವರ್ಷ | ನ್ಯಾಯಾಧೀಶರ ಸಂಖ್ಯೆ | ಮೂಲ ದಾವೆಗಳು (ಒರಿಜಿನಲ್ ಸೂಟ್ಸ್) | | ಮೇಲ್ಮನವಿ | | ನ್ಯಾಯಾಲಯದಲ್ಲಿ ಜಮಾ ಆದ ಮೊತ್ತ ರೂ. | ಖರ್ಚು ರೂ. |
|---|---|---|---|---|---|---|---|
| | | ಮೂಲದಾವೆ | ಇತರೆ | ರೆಗ್ಯುಲರ್ | ಇತರೆ | | |
| 1970-71 | 3 | 5 | 203 | 154 | 331 | 36,674 | 14,75,819 |
| 1975-76 | 3 | 6 | 259 | 24 | 155 | 819 | 5,23,794 |
| 1981-82 | 3 | 3 | 83 | 34 | 452 | 1,09,381 | 9,83,255 |
| 1985-86 | 3 | 3 | 735 | 26 | 372 | 1,10,071 | 18,45,890 |
| 1988-89 | 3 | 6 | 1,118 | 11 | 195 | 1,78,985 | 25,16,262 |
| 1991-92 | 3 | 1 | 746 | 48 | 283 | 2,17,682 | 34,74,626 |

**ಕೋಷ್ಟಕ 10.5 : 1970-71 ರಿಂದ 1991-92 ರವರೆಗೆ ಧಾರವಾಡ ಜಿಲ್ಲೆಯಲ್ಲಿ ಸಿವಿಲ್ ನ್ಯಾಯಾಲಯಗಳಲ್ಲಿನ ದಾವೆಗಳ ವಿವರ**

| ವರ್ಷ | ನ್ಯಾಯಾಧೀಶರ ಸಂಖ್ಯೆ | ಮೂಲ ದಾವೆ: ಒರಿಜಿನಲ್ ಮತ್ತು ಲಘು ವ್ಯವಹಾರ | ಮೂಲ ದಾವೆ: ಇತರೆ | ಮೇಲ್ಮನವಿ: ರೆಗ್ಯುಲರ್ | ಮೇಲ್ಮನವಿ: ಇತರೆ | ನ್ಯಾಯಾಲಯಕ್ಕೆ ಜಮಾ | ಖರ್ಚು |
|---|---|---|---|---|---|---|---|
| 1970-71 | 4 | 243 | 140 | 280 | 116 | 51,690 | 1,59,781 |
| 1975-76 | 5 | 563 | 422 | 517 | 186 | 2,74,204 | 7,51,569 |
| 1981-82 | 7 | 1,045 | 616 | 413 | 144 | 22,37,639 | 20,86,771 |
| 1985-86 | 7 | 1,266 | 604 | 291 | 190 | 31,53,842 | 28,78,705 |
| 1988-89 | 7 | 1,783 | 832 | 445 | 219 | 41,20,789 | 50,44,957 |
| 1991-92 | 7 | 599 | 1,614 | 292 | 158 | 53,51,044 | 84,89,054 |

**ಕೋಷ್ಟಕ 10.6 : 1970-71 ರಿಂದ 1991-92 ರ ವರೆಗೆ ಧಾರವಾಡ ಜಿಲ್ಲೆಯಲ್ಲಿ ಮುನ್ಸೀಫ ನ್ಯಾಯಾಲಯಗಳಲ್ಲಿನ ದಾವೆಗಳ ವಿವರ.**

| ವರ್ಷ | ನ್ಯಾಯಾಧೀಶರ ಸಂಖ್ಯೆ | ಮೂಲ ದಾವೆ: ಒರಿಜಿನಲ್ ಲಘು ವ್ಯವಹಾರ | ಮೂಲ ದಾವೆ: ಇತರ | ಮೇಲ್ಮನವಿ: ರೆಗ್ಯುಲರ್ | ಮೇಲ್ಮನವಿ: ಇತರ | ನ್ಯಾಯಾಲಯಕ್ಕೆ (ರೂಗಳಲ್ಲಿ): ಜಮಾ | ನ್ಯಾಯಾಲಯಕ್ಕೆ (ರೂಗಳಲ್ಲಿ): ಖರ್ಚು |
|---|---|---|---|---|---|---|---|
| 1970-71 | 23 | 2,539 | 5,172 | - | - | 2,78,330 | 8,17,651 |
| 1975-76 | 20 | 2,316 | 1,228 | - | - | 3,76,420 | 13,83,966 |
| 1981-82 | 18 | 2,092 | 2,415 | - | - | 18,06,970 | 42,42,181 |
| 1985-86 | 17 | 2,631 | 2,059 | - | - | 20,09,742 | 59,60,642 |
| 1988-89 | 21 | 3,945 | 1,382 | - | - | 52,50,026 | 1,62,49,264 |
| 1991-92 | 23 | 5,624 | 1,428 | - | - | 52,77,088 | 1,41,51,944 |

**ಕೋಷ್ಟಕ 10.7 : 1970-71 ರಿಂದ 1991-92 ರವರೆಗೆ ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಜಡ್ಜರ ನ್ಯಾಯಾಲಯದಲ್ಲಿನ ದಾವೆಗಳ ವಿವರ.**

| ವರ್ಷ | ಮೂಲ ದಾವೆ | | ಜಾರಿ ದಾವೆಗಳು | | ಇತರೆ | | ರೆಗ್ಯುಲರ್ ಮೇಲ್ಮನವಿ | | ಇತರೆ ಮೇಲ್ಮನವಿ | | ದಿವಾಳಿ ಮನವಿ | |
|---|---|---|---|---|---|---|---|---|---|---|---|---|
| | ದಾಖಲಾತಿ | ತೀರ್ಮಾನ | ದಾ | ತೀ | ದಾ | ತೀ | ದಾ | ತೀ | ದಾ | ತೀ | ದಾ | ತೀ |
| 1970-71 | 6 | 5 | 3 | 3 | 220 | 203 | 111 | 154 | 479 | 331 | 2 | - |
| 1975-76 | 4 | 6 | 6 | 2 | 312 | 259 | 9 | 24 | 166 | 155 | - | 1 |
| 1981-82 | 3 | 3 | 1 | 2 | 1,114 | 830 | 75 | 34 | 375 | 452 | 2 | 2 |
| 1985-86 | 3 | 3 | 1,192 | 735 | 178 | 122 | 40 | 26 | 436 | 372 | - | - |
| 1988-89 | 11 | 6 | 97 | 85 | 2,759 | 1,118 | 81 | 11 | 832 | 195 | | |
| 1991-92 | 9 | 1 | 167 | 138 | 2,443 | 746 | 72 | 48 | 965 | 283 | - | 1 |

**ಕೋಷ್ಟಕ 10.8 : 1970-71 ರಿಂದ 1991-92 ರವರೆಗೆ ಧಾರವಾಡ ಜಿಲ್ಲೆಯಲ್ಲಿ ಸಿವಿಲ್ ಜಡ್ಜರವರ ನ್ಯಾಯಾಲಯದಲ್ಲಿ ದಾವೆಗಳ ವಿವರ.**

| ವರ್ಷ | ಮೂಲ ದಾವೆ | | ಲಘು ವ್ಯವಹಾರಗಳ ದಾವೆ | | ಜಾರಿ ದಾವೆ | | ಇತರ | | ದಿವಾಳಿಮನವಿ | | ನಿಯಮಿತ | | ಇತರ ಮೇಲ್ಮನವಿ | |
|---|---|---|---|---|---|---|---|---|---|---|---|---|---|---|
| | ದಾಖಲೆ | ತೀರ್ಮಾನ | ದಾ | ತೀ | ದಾ | ತೀ | ದಾ | ತೀ | ದಾ | ತೀ | ದಾ | ತೀ | ದಾ | ತೀ |
| 1970-71 | 144 | 87 | 154 | 156 | 257 | 271 | 137 | 140 | 14 | 13 | 516 | 280 | 129 | 116 |
| 1975-76 | 305 | 107 | 404 | 366 | 424 | 345 | 365 | 422 | - | 2 | 485 | 517 | 291 | 186 |
| 1981-82 | 814 | 460 | 649 | 585 | 575 | 469 | 1,727 | 616 | 1 | - | 409 | 413 | 149 | 144 |
| 1985-86 | 1,051 | 607 | 774 | 659 | 1,008 | 604 | 760 | 698 | 1 | 1 | 374 | 291 | 214 | 190 |
| 1988-89 | 1,346 | 967 | 669 | 816 | 1,351 | 890 | 2,451 | 832 | 6 | 6 | 322 | 445 | 167 | 219 |
| 1991-92 | 439 | 263 | 252 | 336 | 1,702 | 1,064 | 1,362 | 679 | - | - | 221 | 197 | 165 | 145 |

**ಕೋಷ್ಟಕ 10.9 : 1970-71 ರಿಂದ 1991-92 ರವರೆಗೆ ಧಾರವಾಡ ಜಿಲ್ಲೆಯಲ್ಲಿ ಮುನ್ಸೀಫ಼ ನ್ಯಾಯಾಲಯಗಳಲ್ಲಿಸ ದಾವೆಗಳ ವಿವರ.**

| ವರ್ಷ | ಮೂಲದಾವೆಗಳು | | ಲಘು ವ್ಯವಹಾರ | | ಜಾರಿ ದಾವೆಗಳು ದಾವೆಗಳು | | ಇತರೆ | |
|---|---|---|---|---|---|---|---|---|
| | ದಾಖಲೆ | ತೀರ್ಮಾನ | ದಾ | ತೀ | ದಾ | ತೀ | ದಾ | ತೀ |
| 1970-71 | 1,988 | 2,010 | 497 | 529 | 1,208 | 1,516 | 4,185 | 5,161 |
| 1975-76 | 2,096 | 1,879 | 454 | 437 | 1,169 | 1,142 | 845 | 1,228 |
| 1981-82 | 2,548 | 2,091 | 228 | 275 | 936 | 857 | 1,513 | 2,415 |
| 1985-86 | 3,303 | 2,548 | 55 | 83 | 2,228 | 2,059 | 943 | 769 |
| 1988-89 | 4,806 | 3,892 | 46 | 53 | 950 | 782 | 1,366 | 1,382 |
| 1991-92 | 5,449 | 5,590 | 50 | 34 | 1,673 | 1,357 | 1,496 | 1,428 |

ಇತರ ಕಾಲಂಗಳಲ್ಲಿ ಪ್ರಕರಣಗಳು ಇಲ್ಲ.

**ಕೋಷ್ಟಕ 10.10 : 1970-71 ರಿಂದ 1991-92 ರವರೆಗೆ ಧಾರವಾಡ ಜಿಲ್ಲೆಯಲ್ಲಿ ಕ್ರಿಮಿನಲ್ ವ್ಯಾಜ್ಯಗಳ ವಿವರ.**

| ವರ್ಷ | ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳು | ಮೂಲ ದಾವೆ | | ಮೇಲ್ಮನವಿ | | ಮೂಲ ದಾವೆ | | ಮ್ಯಾಜಿಸ್ಟ್ರೇಟಗಳ ಸಂಖ್ಯೆ |
|---|---|---|---|---|---|---|---|---|
| | | ರೆಗ್ಯುಲರ್ | ಇತರೆ | ಮೂಲ | ಇತರೆ | ರೆಗ್ಯುಲರ್ | ಇತರ | |
| | | ಜಿಲ್ಲೆ ಮತ್ತು ಸತ್ರ ನ್ಯಾಯಾಲಯ | | | | ಮ್ಯಾಜಿಸ್ಟ್ರೇಟರ ನ್ಯಾಯಾಲಯ | | |
| 1970-71 | 3 | 71 | 20 | 71 | - | 23,157 | 2,170 | 17 |
| 1975-76 | 3 | 55 | 62 | 187 | - | 26,322 | 3,882 | 18 |
| 1981-82 | 3 | 75 | 129 | 102 | - | 28,602 | 2,235 | 21 |
| 1985-86 | 3 | 69 | 264 | 81 | - | 23,370 | 2,702 | 18 |
| 1988-89 | 3 | 67 | 329 | 98 | - | 20,171 | 2,148 | 21 |
| 1991-92 | 3 | 96 | 255 | 86 | - | 16,731 | 2,311 | 24 |

**ಜಿಲ್ಲಾ ಕಾನೂನು ನೆರವು ಸಮಿತಿ, ಧಾರವಾಡ :** ಈ ಸಮಿತಿಯು 1983 ರಲ್ಲಿ ಪ್ರಾರಂಭವಾಯಿತು. ಪ್ರಾರಂಭವಾದಂದಿನಿಂದ 1993 ರವರೆಗೆ 448 ಜನರಿಗೆ ಸಹಾಯವನ್ನು ಒದಗಿಸಲಾಗಿದೆ. ಸಿವಿಲ್ ದಾವೆಗಳು, ಪರಿಹಾರ ದಾವೆಗಳು, ಕ್ರಿಮಿನಲ್ ದಾವೆಗಳು, ಮೋಟಾರು ವಾಹನ ಅಪಘಾತಗಳ ಮೇಲಿನ ದಾವೆಗಳು ಮೊದಲಾದವುಗಳಲ್ಲಿ ಸಹಾಯವನ್ನು ಒದಗಿಸಲಾಗಿದೆ. 1989-90 ರಿಂದ 1992-93 ರವರೆಗೆ, ಈ ಸಮಿತಿಗಾಗಿ ರೂ.2.36 ಲಕ್ಷ ವೆಚ್ಚವಾಗಿದೆ.

ಈ ಸಮಿತಿಯಿಂದ 21 ಲೋಕ ಅದಾಲತ್‌ಗಳಲ್ಲಿ ನಡೆಸಿದ್ದು 2,348 ದಾವೆಗಳನ್ನು ತೀರ್ಮಾನ ಮಾಡಿ 279 ಲಕ್ಷ ರೂ.ಗಳನ್ನು ಪರಿಹಾರ ಧನವನ್ನಾಗಿ ಕೊಡಲಾಗಿದೆ. 37 ಕಾನೂನು ನೆರವು ಕ್ಯಾಂಪ್‌ಗಳನ್ನೂ, 7 ಕಾನೂನು ಶಿಬಿರಗಳನ್ನು ನಡೆಸಲಾಗಿದೆ.

**ತಾಲೂಕು ಕಾನೂನು ನೆರವು ಸಮಿತಿ – ಹುಬ್ಬಳ್ಳಿ :** ಈ ಸಮಿತಿಯು 1984 ರಲ್ಲಿ ಪ್ರಾರಂಭವಾಯಿತು. 1993 ರವರೆಗೆ ಏಳು ಜನತಾ ನ್ಯಾಯಾಲಯಗಳನ್ನು ಏರ್ಪಡಿಸಲಾಗಿತ್ತು. 1987 ರಲ್ಲಿ 81 ಪ್ರಕರಣಗಳು, 88 ರಲ್ಲಿ 54 ಪ್ರಕರಣಗಳು, 90 ರಲ್ಲಿ 10 ಪ್ರಕರಣಗಳು, 92 ರಲ್ಲಿ 124 ಕ್ರಿಮಿನಲ್ ಮೊಕದ್ದಮೆಗಳನ್ನು ತೀರ್ಮಾನಿಸಲಾಗಿತ್ತು. 1993 ರಲ್ಲಿ ಒಟ್ಟು 32 ಕ್ರಿಮಿನಲ್ ಪ್ರಕರಣಗಳನ್ನು ತೀರ್ಮಾನ ಮಾಡಲಾಗಿದೆ.

1986 ರಲ್ಲಿ ಮಂಟೂರು ಮತ್ತು ಅರಳೀಕಟ್ಟಿ ಗ್ರಾಮಗಳಲ್ಲಿ, 1987 ರಲ್ಲಿ ಹೆಬಸೂರು ಮತ್ತು ತಾರಿಹಾಳ ಗ್ರಾಮಗಳಲ್ಲಿ ಕಾನೂನು ನೆರವು ಶಿಬಿರ ನಡೆಸಲಾಯಿತು. 1993 ರಲ್ಲಿ ಎರಡು ಬಾರಿ ಕಾನೂನು ವಿದ್ಯಾ ಪ್ರಸಾರ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

**ಕೋಷ್ಟಕ 10.11 : 1994 ರಲ್ಲಿ ಧಾರವಾಡ ಜಿಲ್ಲೆಯಲ್ಲಿರುವ ನ್ಯಾಯವಾದಿಗಳ ಸಂಖ್ಯೆ**

| | | ಪುರುಷರು | ಸ್ತ್ರೀಯರು | ಒಟ್ಟು | | | ಪುರುಷರು | ಸ್ತ್ರೀಯರು | ಒಟ್ಟು |
|---|---|---|---|---|---|---|---|---|---|
| 1. | ಧಾರವಾಡ | 570 | 42 | 612 | 9. | ಲಕ್ಷ್ಮೇಶ್ವರ | 18 | - | 18 |
| 2. | ಹುಬ್ಬಳ್ಳಿ | 500 | 25 | 525 | 10. | ಬ್ಯಾಡಗಿ | 18 | 2 | 20 |
| 3. | ಗದಗ | 120 | 5 | 125 | 11. | ಹಾನಗಲ್ | 28 | 1 | 29 |
| 4. | ಹಾವೇರಿ | 84 | 1 | 85 | 12. | ಹಿರೇಕೆರೂರು | 42 | - | 42 |
| 5. | ರಾಣೆಬೆನ್ನೂರು | 123 | 7 | 130 | 13. | ನರಗುಂದ | 21 | - | 21 |
| 6. | ಕುಂದಗೋಳ | 15 | - | 15 | 14. | ನವಲಗುಂದ | 25 | - | 25 |
| 7. | ಸವಣೂರು | 17 | - | 17 | 15. | ರೋಣ | 22 | - | 22 |
| 8. | ಶಿಗ್ಗಾಂವಿ | 22 | - | 22 | 16. | ಕಲಘಟಗಿ | 12 | - | 12 |
| | | | | | | ಮೊತ್ತ | 1637 | 83 | 1720 |

## ಪೋಲೀಸ್ ಆಡಳಿತ

ಈ ಜಿಲ್ಲೆಯಲ್ಲಿ 1827 ರ ಹೊತ್ತಿಗೆ, ಪೋಲೀಸ್ ವ್ಯವಸ್ಥೆಯು ಬಾಂಬೆ ರೆಗ್ಯುಲೇಶನ್ 12 (1827) ಈ ನಿಯಮದಂತೆ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅವರ ಆಡಳಿತದ ಹತೋಟಿಯಲ್ಲಿದ್ದಿತು. ಆವರೆಗೆ ಇದ್ದ ಮರಾಠರ ಕಾಲದ ಶೇತ್‌ಸನದಿ ಎಂಬ ಗ್ರಾಮೀಣ ಪೇದೆಗಳನ್ನೇ ಅವರು ಪೋಲೀಸ್ ಪಡೆಗೆ ಬಳಸಿಕೊಂಡರು. 1882 ರಲ್ಲಿ ಜಿಲ್ಲೆಯಲ್ಲಿನ ಪೋಲೀಸ್ ಬಲದ ಸಂಖ್ಯೆ 733. ಇವರಲ್ಲಿ ಒಬ್ಬರು ಜಿಲ್ಲೆ ಅಧೀಕ್ಷಕರು 2 ಅಧೀನ ಅಧಿಕಾರಿಗಳು, 111 ಇತರ ಅಧೀನ ಅಧಿಕಾರಿಗಳು, 25 ಅಶ್ವಾರೂಢ ಪೋಲೀಸ ಸಿಬ್ಬಂದಿ ಹಾಗೂ 594 ಕಾನ್‌ಸ್ಟೇಬಲ್‌ಗಳು ಇದ್ದರು. ನಂತರ 1890 ರ ಬಾಂಬೆ ಡಿಸ್ಟ್ರಿಕ್ಟ್ ಪೋಲೀಸ್ ಆಕ್ಟ ಜಾರಿಗೆ ಬಂದಿದ್ದು 1951 ರ

ವರೆಗೂ ಜಾರಿಯಲ್ಲಿತ್ತು. ಧಾರವಾಡದಲ್ಲಿ ಪೋಲೀಸ್ ಆಡಳಿತದ ಕೇಂದ್ರ ಸ್ಥಾನವಲ್ಲದೆ 28 ಪೋಲೀಸ್ ಠಾಣೆಗಳು, 26 ಔಟ್‌ಪೋಸ್ಟಗಳೂ ಇದ್ದವು. ಪೋಲೀಸ್ ಠಾಣೆಗಳಲ್ಲಿ 4 ಟೌನ್ ಪೋಲೀಸ್ ಠಾಣೆಗಳು 12 ತಾಲೂಕು ಪೋಲೀಸ್ ಠಾಣೆಗಳು 4 ಮಹಲ್ ಪೋಲೀಸ್ ಠಾಣೆಗಳು, ಮತ್ತು 8 ಉಪ ಪೋಲೀಸ್ ಠಾಣೆಗಳಿದ್ದವು. 1952 ರ ಹೊತ್ತಿಗೆ ಒಬ್ಬ ಪೋಲೀಸ್ ಅಧೀಕ್ಷಕರು, 2 ಡೆಪ್ಯೂಟಿ ಅಧೀಕ್ಷಕರು, 4 ಇನ್ಸ್‌ಪೆಕ್ಟರುಗಳು 42 ಸಬ್ ಇನ್ಸ್‌ಪೆಕ್ಟರುಗಳು, 193 ನಿಶ್ಶಸ್ತ್ರ ಹೆಡ್ ಕಾನ್‌ಸ್ಟೇಬಲ್‌ಗಳು, 105 ಸಶಸ್ತ್ರ ಹೆಡ್‌ಕಾನ್‌ಸ್ಟೇಬಲ್‌ಗಳು, 679 ನಿಶ್ಶಸ್ತ್ರ ಹೆಡ್ ಕಾನ್‌ಸ್ಟೇಬಲ್‌ಗಳು, 105 ಕಾನ್‌ಸ್ಟೇಬಲ್‌ಗಳು ಜಿಲ್ಲೆಯಲ್ಲಿ ಇದ್ದರು.

ಸರಾಸರಿ ಆರು ಚದರ ಮೈಲಿಗೆ ಮತ್ತು 1,203 ಜನಸಂಖ್ಯೆಗೆ ಒಬ್ಬ ಕಾನ್‌ಸ್ಟೇಬಲ್ ಇದ್ದರು. ಒಟ್ಟು 733 ಪೋಲೀಸ್ ಸಿಬ್ಬಂದಿಯನ್ನು 1882 ರಲ್ಲಿ ಜಿಲ್ಲೆಯ ಶಾಂತಿ ರಕ್ಷಕರಾಗಿ, ಕೇಂದ್ರೀಯ ಅಥವಾ ಉಪ ಬಂದಿಖಾನೆಯಲ್ಲಿ ಹಾಗೂ ಖಜಾನೆಯ ಕಾವಲಿಗಾಗಿ ಖೈದಿಗಳ ಬೇಹುಗಾರರಾಗಿ, ಕೆಲಸ ಮಾಡುತ್ತಿದ್ದರು. 367 ಪೋಲೀಸ್ ಸಿಬ್ಬಂದಿಗೆ, ಮದ್ದುಗುಂಡುಗಳ ಪಿಸ್ತೂಲನ್ನು, 42 ಸಿಬ್ಬಂದಿಗೆ 2 ಕತ್ತಿಗಳನ್ನು ಒದಗಿಸಲಾಗಿತ್ತು. ಪೋಲೀಸ್ ಅಧೀಕ್ಷಕರನ್ನು ಹೊರತು ಉಳಿದೆಲ್ಲ ಸಿಬ್ಬಂದಿ ಭಾರತೀಯರಾಗಿದ್ದರು.

ಮುಂಬೈ ಪೋಲೀಸ್ ಆಕ್ಟ್ 1951 ರಂತೆ, ಜಿಲ್ಲೆಯ ಪೋಲೀಸ್ ಆಡಳಿತವು ಜಿಲ್ಲಾ ಮ್ಯಾಜಿಸ್ಟ್ರೇಟರ ನಿಯಂತ್ರಣದಲ್ಲಿತ್ತು. ನ್ಯಾಯಾಡಳಿತ ಮತ್ತು ಮುಖ್ಯವಾದ ತೀರ್ಮಾನಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟರು ಮಾಡುತ್ತಿದ್ದು ಪೋಲೀಸ್ ಸಿಬ್ಬಂದಿಯ ನೇಮಕಾತಿ, ಅವರ ತರಬೇತಿ, ಅವರ ವಸತಿ ವ್ಯವಸ್ಥೆ ಇತ್ಯಾದಿ ಜವಾಬ್ದಾರಿಗಳು ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಬಾಂಬೆ ಇವರ ನಿಯಂತ್ರಣದಲ್ಲಿದ್ದವು. ಧಾರವಾಡ ಜಿಲ್ಲೆಯ, ಜಿಲ್ಲಾ ಪೋಲೀಸ್ ಅಧೀಕ್ಷಕರು, ಜಿಲ್ಲೆಯ ಪೋಲೀಸ್ ಬಲದ ವ್ಯವಸ್ಥಾಪಕ ಮುಖ್ಯಸ್ಥರಾಗಿದ್ದರು. ಉತ್ತರ ಮತ್ತು ದಕ್ಷಿಣ ವಿಭಾಗಗಳೆಂಬ ಎರಡು ವಿಭಾಗಗಳನ್ನಾಗಿ ವಿಂಗಡಿಸಿ, ಪ್ರತೀವಿಭಾಗಕ್ಕೂ ಒಬ್ಬ ಉಪ ವಿಭಾಗೀಯ ಪೋಲೀಸ್ ಅಧಿಕಾರಿ ಇರುತ್ತಿದ್ದರು. 1940 ಕ್ಕೂ ಮೊದಲು, 974 ಪೋಲೀಸ್ ಸಿಬ್ಬಂದಿ ಇದ್ದು 1942 ರ ವೇಳೆಗೆ ಈ ಸಂಖ್ಯೆ 1278 ಕ್ಕೆ ಮೀರಿ, 1948 ರಲ್ಲಿ 1,600 ಕ್ಕೆ ಏರಿತು. 1952 ರಲ್ಲಿ ಪೋಲೀಸ್ ಸಿಬ್ಬಂದಿಯ ವಿವರ ಈ ರೀತಿ ಇದ್ದಿತು. ಪೋಲೀಸ್ ಅಧೀಕ್ಷಕರು-1, ಡೆಪ್ಯೂಟಿ ಅಧೀಕ್ಷಕರು-2, ಇನ್‌ಸ್ಪೆಕ್ಟರುಗಳು- 4, ಸಬ್ ಇನ್‌ಸ್ಪೆಕ್ಟರುಗಳು-42, ನಿಶ್ಶಸ್ತ್ರ ಹೆಡ್‌ಕಾನ್‌ಸ್ಟೇಬಲ್-193, ಸಶಸ್ತ್ರ ಹೆಡ್‌ಕಾನ್‌ಸ್ಟೇಬಲ್- 105, ನಿಶ್ಶಸ್ತ್ರ ಕಾನ್‌ಸ್ಟೇಬಲ್ - 679, ಹಾಗೂ ಸಶಸ್ತ್ರ ಕಾನ್‌ಸ್ಟೇಬಲ್- 546.

ಜಿಲ್ಲಾ ಪೋಲೀಸ್ ಅಧೀಕ್ಷಕರು (ಪೋಲೀಸ್ ಸೂಪರಿಂಟೆಂಡೆಂಟ್) ಪೋಲೀಸ ಬಲ ವ್ಯವಸ್ಥಾಪನೆಯ ಮುಖ್ಯಸ್ಥರಾಗಿದ್ದು, ಪೋಲೀಸ್ ಸಿಬ್ಬಂದಿಯ ಮೇಲಿನ ನಿರ್ದೇಶನ ಮತ್ತು ನಿಯಂತ್ರಣದ ಜವಾಬ್ದಾರಿಯನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಉಸ್ತುವಾರಿಯಲ್ಲಿ ಹೊಂದಿದ್ದರು. ಡೆಪ್ಯೂಟಿ ಅಧೀಕ್ಷಕರು ಅಥವಾ ಸಹಾಯಕ ಅಧೀಕ್ಷಕರು ತಮ್ಮ ಕ್ಷೇತ್ರದಲ್ಲಿ ನಡೆಯುವ ಎಲ್ಲಾ ಅಪರಾಧಗಳ ತನಿಖೆ ಮತ್ತು ಅವುಗಳ ತಡೆಗಟ್ಟುವ ಅಧಿಕಾರ ಹೊಂದಿದ್ದರು. ಆಗಾಗ್ಗೆ ಪೋಲೀಸ್ ಠಾಣೆಗಳಲ್ಲಿ ತನಿಖೆ ಮಾಡುವ ಅಧಿಕಾರವನ್ನೂ ಹೊಂದಿದ್ದರು. ಧಾರವಾಡದಲ್ಲಿ ಒಬ್ಬ ಹೋಂ ಪೋಲೀಸ್ ಇನ್‌ಸ್ಪೆಕ್ಟರ್ ಇದ್ದು ಇವರು ಕಚೇರಿಯ ಅಧೀಕ್ಷಕರಾಗಿಯೂ ಕೆಲಸ ನಿರ್ವಹಿಸುತ್ತಿದ್ದರು. ಪ್ರಧಾನ ಪೋಲೀಸ್ ಕಚೇರಿ, ನಗರ ಹಾಗೂ ಕೇಂದ್ರಸ್ಥಾನ ಪೋಲೀಸ್ ಕಛೇರಿಗಳ ಉಸ್ತುವಾರಿ ಮತ್ತು ಪೋಲೀಸ್ ಸೂಪರಿಂಟೆಂಡೆಂಟ್‌ರ ಕಾರ್ಯವನ್ನು ಅವರ ಗೈರುಹಾಜರಿಯಲ್ಲಿ ನಿರ್ವಹಿಸುತ್ತಿದ್ದರು.

ಸಹಾಯಕ ಪೋಲೀಸ್ ಆರಕ್ಷಕರನ್ನು ಭಾರತ ಸರ್ಕಾರದ ಲೋಕಸೇವಾ ಆಯೋಗದ ಮುಖಾಂತರ ನೇಮಕ ಮಾಡಿ ಕೊಳ್ಳಲಾಗುತ್ತಿತ್ತು. ಇವರುಗಳನ್ನು ಮೌಂಟ್ ಅಬುವಿನಲ್ಲಿರುವ ಕೇಂದ್ರೀಯ ಪೋಲೀಸ್ ಟ್ರೈನಿಂಗ್ ಕಾಲೇಜ್‌ನಲ್ಲಿ ತರಬೇತಿಗಾಗಿ ಕಳುಹಿಸುತ್ತಿದ್ದರು. ಪೋಲೀಸ್ ಇನ್ಸ್‌ಪೆಕ್ಟರ್‌ನನ್ನು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ನೇಮಕ ಮಾಡುತ್ತಿದ್ದರು. 1952 ರಲ್ಲಿ ಜಿಲ್ಲೆಯಲ್ಲಿ 60 ಅಧಿಕಾರಿಗಳು, 1,752 ಪೋಲೀಸ್ ಸಿಬ್ಬಂದಿ ಇದ್ದರು. ಇವರಲ್ಲಿ ಎಲ್ಲರೂ ಅಕ್ಷರಸ್ಥರಾಗಿದ್ದರು. 1952 ರಲ್ಲಿ ಧಾರವಾಡ ಜಿಲ್ಲಾ ಪೋಲೀಸ್ ಇಲಾಖೆಯಲ್ಲಿ ಇದ್ದ ಕೆಲವು ಶಸ್ತ್ರಗಳ ವಿವರ ಹೀಗಿದೆ : 10 ಕಾರ್ಬೈನ್ ಮೆಶಿನ್ ಗನ್ನು, 817 ರೈಫಲ್ (33 ಬೋರ್), 574 ಮಸ್ಕೆಟ್ (410 ಬೋರ) ಹಾಗೂ 74 ರಿವಾಲ್ವರ್. ಇವಲ್ಲದೆ, 100 ಇಟಾಲಿಯನ್ ರೈಫಲ್, 23 ರಿವಾಲ್ವರ್ ಮತ್ತು 200 ಮಸ್ಕೆಟ್‌ಗಳನ್ನು ಗೃಹರಕ್ಷಕದಳದವರಿಗೆ ನೀಡಲಾಗಿತ್ತು. ಜಿಲ್ಲೆಯ ಪೋಲೀಸ್ ಇಲಾಖೆಯಲ್ಲಿ 14 ಮೋಟಾರು ವಾಹನಗಳು, (ಒಂದು ಮೋಟರ ಸೈಕಲ್ ಸೇರಿದಂತೆ) ಇದ್ದವು. ಇವುಗಳಲ್ಲಿ ಎರಡನ್ನು ಮದ್ಯಪಾನ ನಿಷೇಧ ಜಾರಿಗೆ ತರಲು ಪ್ರತ್ಯೇಕವಾಗಿ ಆಳವಡಿಸಲಾಗಿತ್ತು. ವಯರ್‌ಲೆಸ್ ಗ್ರಿಡ್‌ನಲ್ಲಿ ಒಂದು ಸ್ಥಿರ ವೈರ್‌ಲೆಸ್ ಕೇಂದ್ರ ಮತ್ತು 3 ರಿಸೀವರಗಳಿದ್ದವು.

ಬೆಳಗಾವಿಯಲ್ಲಿ ರಾಜ್ಯದ ಕಾದಿಟ್ಟ ಪೋಲೀಸ್ ಪಡೆಯಿದ್ದು ಇದು ಸಶಸ್ತ್ರ ಪೋಲೀಸ್ ಪಡೆಯಾಗಿತ್ತು. ಧಾರವಾಡದಲ್ಲಿ ಲಂಚನಿರೋಧ ಶಾಖೆಯ ಒಬ್ಬ ಇನ್ಸ್‌ಪೆಕ್ಟರ್ ಇದ್ದು ಇವರ ವ್ಯಾಪ್ತಿ ಧಾರವಾಡ, ಬಿಜಾಪುರ, ಮತ್ತು ಕಾರವಾರ ಜಿಲ್ಲೆಯವರೆಗೂ ಹರಡಿತ್ತು.

**ಸವಣೂರು ಸಂಸ್ಥಾನದ ಪೋಲೀಸ್ ಆಡಳಿತ** : ಧಾರವಾಡ ಜಿಲ್ಲೆಯ ಸವಣೂರು 25 ಗ್ರಾಮಗಳ ಒಂದು ಪ್ರತ್ಯೇಕ ಸಂಸ್ಥಾನವಾಗಿದ್ದು ಅಲ್ಲಿಯ ಪೋಲೀಸ್ ಆಡಳಿತದ ವ್ಯವಸ್ಥೆ ಹೀಗಿತ್ತು : ಪೋಲೀಸ್ ಇಲಾಖೆಯಲ್ಲಿನ ಸಿಬ್ಬಂದಿ 45. ಪೋಲೀಸರನ್ನು ನೇಮಿಸಿಕೊಳ್ಳುವಾಗ ಒಳ್ಳೆಯ ನಡತೆ, ಕಾರ್ಯತತ್ಪರತೆ, ಸೇವಾ ಮನೋಭಾವವಿದ್ದವರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಒಂದು ಬಾರಿಗೆ ಇಬ್ಬರನ್ನು ಧಾರವಾಡಕ್ಕೆ ತರಬೇತಿಗೆ ಕಳುಹಿಸಿ, ಅವರು ಉಳಿದ ಪೋಲೀಸರಿಗೆ ಕವಾಯತು, ಕಾನೂನು, ತನಿಖೆ, ಸಾರ್ವಜನಿಕ ಸಂಪರ್ಕ ಮುಂತಾದ ವಿಷಯಗಳ ಬಗ್ಗೆ ಸವಣೂರಿನಲ್ಲಿಯೇ ತರಬೇತಿ ಕೊಡುತ್ತಿದ್ದರು. 1914 ರಲ್ಲಿ ಸವಣೂರು ಸಂಸ್ಥಾನದಲ್ಲಿ ಚಂದಾಪುರ, ಹೋತನಹಳ್ಳಿ, ಮುಳಕೇರಿ, ಕಬನೂರು, ಡೊಂಬರಮತ್ತೂರು, ಮುಂತಾದ ಸ್ಥಳಗಳಲ್ಲಿ ಪೋಲೀಸರು ಇರುತ್ತಿದ್ದರು. ಅವರು ತಮ್ಮ ತಮ್ಮ ಬೀಟಿಗೆ (ಗಸ್ತು) ಒಳಪಟ್ಟ ಹಳ್ಳಿಗಳಲ್ಲಿ ನಡೆದ ಅಪರಾಧಗಳ ಬಗ್ಗೆ ಮುಂಜಾಗ್ರತೆ ಕ್ರಮಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಸವಣೂರಿನಲ್ಲಿಯ ಹಿರಿಯ ಪೋಲೀಸ್ ಅಧಿಕಾರಿಗಳಿಗೆ ವರದಿ ಸಲ್ಲಿಸುತ್ತಿದ್ದರು. ಪೋಲೀಸ್ ಮುಖ್ಯಾಧಿಕಾರಿಯು ತನ್ನ ಇಲಾಖೆಗೆ ಸಂಬಂಧಪಟ್ಟ ದೈನಂದಿನ ವರದಿಯನ್ನು ಕಡ್ಡಾಯವಾಗಿ ಪ್ರತಿದಿನ ಬೆಳಗ್ಗೆ ಆರು ಘಂಟೆಗೆ ನವಾಬ ಸಾಹೇಬರ ನಿವಾಸಕ್ಕೆ ಹೋಗಿ ಕೊಡಬೇಕಾಗುತ್ತಿತ್ತು. ಸವಣೂರು ನಗರದಲ್ಲಿ ಎಂಟು ಪೋಲೀಸ್ ಚೌಕಿಗಳಿದ್ದವು. ಸವಣೂರು ನವಾಬರಿಗೆ, ಜಿಲ್ಲಾ ಸೆಶನ್ಸ್ ನ್ಯಾಯಾಧೀಶರ ಅಧಿಕಾರವಿತ್ತು. ಪೋಲೀಸ್ ಹಿರಿಯ ಅಧಿಕಾರಿಯ ಮೇಲೆ ಪೊಲಿಟಿಕಲ್ ಏಜೆಂಟ್ ಎನ್ನುವ ಅಧಿಕಾರಿ ಇರುತ್ತಿದ್ದು, ಅವರು ಆಗಾಗ್ಗೆ ಇಲಾಖೆ ಕಾರ್ಯನಿರ್ವಹಣೆಯ ಪರಿಶೀಲನೆ ಮಾಡುತ್ತಿದ್ದರು.

ಇಂಥದೇ ವ್ಯವಸ್ಥೆ ಕುಂದಗೋಳ, ಶಿರಹಟ್ಟಿ, ಲಕ್ಷ್ಮೇಶ್ವರ, ಗುಡಿಗೇರಿ ಮುಂತಾದ ಸಂಸ್ಥಾನೀ ಪ್ರದೇಶಗಳಲ್ಲಿ ಇತ್ತು. ಈವರೆಗೆ ಕೊಟ್ಟ ಇಡೀ ಜಿಲ್ಲೆಯ ಮಾಹಿತಿಯಲ್ಲಿ ಇಲ್ಲಿ ಇದ್ದ ವ್ಯವಸ್ಥೆಗಳ ಮಾಹಿತಿ ಸೇರಿಲ್ಲ.

ರೈಲ್ವೇ ಪೋಲೀಸ್ ವಿಭಾಗವು ಒಬ್ಬ ಪೋಲೀಸ್ ಅಧೀಕ್ಷಕರ ಅಧೀನದಲ್ಲಿದ್ದು ಸಹಾಯಕ್ಕಾಗಿ ಒಬ್ಬ ಸಬ್ ಡಿವಿಜನಲ್ ಅಧಿಕಾರಿ ಇದ್ದರು. ಧಾರವಾಡದಲ್ಲಿ ಒಂದು ಪೋಲೀಸ್ ಡಿಸ್ಪೆನ್ಸರಿ ಇದ್ದು, ಒಬ್ಬ ಅರೆಕಾಲಿಕ ವೈದ್ಯರು ಇದ್ದರು. ಪೋಲೀಸ್ ಸಿಬ್ಬಂದಿಯ ಕಲ್ಯಾಣಕ್ಕಾಗಿ, ಒಂದು ಕ್ಷೌರಕೇಂದ್ರ, ಕೋಳಿಸಾಕಣೆ ಕೇಂದ್ರ, ಮರಗೆಲಸದ ಕಾರ್ಯಾಗಾರ, ಹೊಲಿಗೆ ಮತ್ತು ನೇಯುವ ತರಗತಿಗಳು ಮೊದಲಾದವನ್ನು ನಡೆಸಲಾಗುತ್ತಿತ್ತು.

**ಕೋಷ್ಟಕ 10.12 : ಧಾರವಾಡ ಜಿಲ್ಲೆಯಲ್ಲಿ 1983 ರಿಂದ 1993 ರ ವರೆಗೆ ಅಪರಾಧದ ವಿವರ.**

| ಅಪರಾಧಗಳು | 1981 | 1982 | 1983 | 1984 | 1985 | 1986 | 1987 | 1988 | 1989 | 1990 | 1991 | 1992 | 1993 |
|---|---|---|---|---|---|---|---|---|---|---|---|---|---|
| 1. ಕೊಲೆ | 82 | 65 | 64 | 83 | 81 | 80 | 94 | 104 | 84 | 73 | 88 | 84 | 92 |
| 2. ಡಕಾಯಿತಿ | 24 | 24 | 16 | 60 | 17 | 26 | 19 | 32 | 15 | 18 | 18 | 25 | 24 |
| 3. ದರೋಡೆ | 36 | 24 | 29 | 28 | 25 | 38 | 35 | 59 | 32 | 15 | | 16 | 32 |
| 4. ಮನೆಮುರಿದು ಕಳ್ಳತನ | 672 | 524 | 559 | 561 | 582 | 509 | 399 | - | - | - | - | 231 | 269 |
| 5. ಕಳ್ಳತನ | 1102 | 813 | 759 | 820 | 871 | 931 | 819 | 776 | 478 | 444 | - | - | 333 |
| 6. ಅತ್ಯಾಚಾರ | 232 | 236 | 64 | 233 | 386 | 269 | 259 | 236 | 339 | 62 | 90 | 73 | 55 |

| ಅಪರಾಧಗಳು | 1981 | 1982 | 1983 | 1984 | 1985 | 1986 | 1987 | 1988 | 1989 | 1990 | 1991 | 1992 | 1993 |
|---|---|---|---|---|---|---|---|---|---|---|---|---|---|
| 7. ಸಾರ್ವಜನಿಕರಿಗೆ ಕಿರಿಕಿರಿ (ಪಬ್ಲಿಕ್ ನ್ಯೂಸೆನ್ಸ್) | 254 | 246 | 618 | 323 | 408 | 382 | 405 | 390 | 416 | 313 | 297 | 270 | 250 |
| 8. ಜೂಜಾಡುವುದು | 1593 | 1522 | 1039 | 630 | 696 | 565 | 562 | 386 | 394 | 355 | 200 | 344 | 225 |
| 9. ಅಸ್ವಾಭಾವಿಕ ಮತ್ತು ಅಪಘಾತದಿಂದ ಸಾವು | 484 | 598 | 536 | 666 | 682 | 1217 | 845 | 846 | 879 | 579 | 776 | 664 | 761 |

**ಕೋಷ್ಟಕ 10.13 : ಧಾರವಾಡ ಜಿಲ್ಲೆಯಲ್ಲಿ 1983 ರಿಂದ 1993 ರ ವರೆಗೆ ಕಳುವಾದ ವಸ್ತುಗಳ ಮೌಲ್ಯ (ರೂ.ಗಳಲ್ಲಿ) ಮತ್ತು ಕಳುವಾದ ವಸ್ತುಗಳು ದೊರಕಿದ ಬಗ್ಗೆ ವಿವರ.**

| | ಕಳುವಾದ ವಸ್ತುಗಳ ಮೌಲ್ಯ | ಪುನಃ ದೊರಕಿದ ವಸ್ತುಗಳ ಮೌಲ್ಯ | ಶೇಕಡಾ |
|---|---|---|---|
| 1981 | 45,12,101 | 8,17,510 | 18.01 |
| 1982 | 105,58,452 | 11,89,722 | 10.07 |
| 1983 | 61,44,112 | 21,26,876 | 34.06 |
| 1984 | 121,25,984 | 24,13,998 | 55.10 |
| 1985 | 73,02,387 | 19,78,027 | 27 |
| 1986 | 75,44,998 | 46,68,371 | 61 |
| 1987 | 107,42,699 | 74,67,570 | 69.3 |
| 1988 | 84,63,883 | 34,00,072 | 40.17 |
| 1989 | 77,65,676 | 24,24,389 | 31.25 |
| 1990 | 74,52,972 | 41,34,862 | 56.0 |
| 1991 | 59,89,979 | 29,34,187 | 50.0 |
| 1992 | 78,86,884 | 43,13,675 | 54.69 |
| 1993 | 74,41,640 | 16,51,187 | 30.00 |

**ಕೋಷ್ಟಕ 10.14 : 1981 ರಿಂದ 1993 ರವರೆಗೆ ಧಾರವಾಡ ಜಿಲ್ಲೆಯಲ್ಲಿ ಕೊಲೆ ಪ್ರಕರಣಗಳಲ್ಲಿ ಉದ್ದೇಶಾನ್ವಯ ವಿಂಗಡಿಸಿ ಇಲ್ಲಿ ಕೊಡಲಾಗಿದೆ.**

| ವರ್ಷ | ಪ್ರೇಮ ಪ್ರಕರಣ | ಹಣದ ಆಸೆಗೆ | ಗೃಹ ಕಲಹ | ದ್ವೇಷ ಮತ್ತು ಕಲಹ | ಇತರೆ | ಒಟ್ಟು |
|---|---|---|---|---|---|---|
| 1981 | 8 | 9 | 14 | - | 51 | 82 |
| 1985 | 3 | 5 | 18 | - | 55 | 81 |
| 1990 | 4 | 2 | 10 | 10 | 46 | 72 |
| 1991 | 10 | 3 | 13 | 8 | 54 | 88 |
| 1992 | 15 | 3 | 17 | 18 | 31 | 84 |
| 1993 | 21 | 3 | 19 | 1 | 35 | 79 |

**ಕೋಷ್ಟಕ 10.15 : ಧಾರವಾಡ ಜಿಲ್ಲೆಯಲ್ಲಿ ಅಸ್ವಾಭಾವಿಕ ಮತ್ತು ಅಪಘಾತಗಳಿಂದ ಮರಣ ಹೊಂದಿದವರ ಸಂಖ್ಯೆ ಹಾಗೂ ಮರಣಕ್ಕೆ ಕಾರಣಗಳನ್ನು ನೀಡುವ ಪಟ್ಟಿ (1981-1993 ರವರೆಗೆ).**

| ಕಾರಣಗಳು | 1981 | 1985 | 1990 | 1991 | 1992 | 1993 |
|---|---|---|---|---|---|---|
| ಅಪಘಾತ | 97 | 61 | 39 | 100 | 60 | 50 |
| ಆತ್ಮಹತ್ಯೆ | 170 | 179 | 149 | 164 | 154 | 151 |
| ಕ್ರೂರ ಪ್ರಾಣಿಗಳಿಂದ | - | - | - | 7 | - | 13 |
| ಬೆಂಕಿಯಿಂದ | 57 | 63 | 27 | - | 52 | 10 |
| ಎತ್ತರದಿಂದ ಬೀಳುವಿಕೆ | - | 21 | 36 | 6 | 35 | 9 |
| ಹಾವು ಕಡಿತ | 11 | 17 | 31 | 14 | 25 | 21 |
| ವಿದ್ಯುತ್ ಶಾಕ್ | 2 | 17 | - | 9 | - | 10 |
| ಗಣಿ ಅಪಘಾತ | - | - | - | 2 | - | - |
| ವಿಷಾಹಾರ | 29 | 134 | 193 | 185 | 229 | 187 |
| ಸಿಡಿಲು | - | 1 | - | 13 | - | 8 |
| ಇತರ | 118 | 189 | 103 | 267 | 109 | 288 |
| ಒಟ್ಟು | 484 | 682 | 579 | 776 | 664 | 761 |

**ಕೋಷ್ಟಕ 10.16 : ಧಾರವಾಡ ಜಿಲ್ಲೆಯಲ್ಲಿ 1981-93 ರವರೆಗೆ, ನಡೆದ ಅಪರಾಧಗಳ ತನಿಖೆ ಮತ್ತು ಅಪರಾಧಗಳ ಬಗ್ಗೆ ವಿವರ. (ಶೇಕಡಾ)**

| ವರ್ಷ | ಕೊಲೆ | ಡಕಾಯಿತಿ | ದರೋಡೆ | ಮನೆ ಒಡೆದು ಕಳ್ಳತನ | ಕಳ್ಳತನ |
|---|---|---|---|---|---|
| 1981 | 82.7 | 58.3 | 64.5 | 34 | 38.8 |
| 1985 | 70.3 | 64.7 | 64 | 31.9 | 40.4 |
| 1990 | 47 | 28.57 | 25 | 2.9 | 64.9 |

| ವರ್ಷ | ಕೊಲೆ | ಡಕಾಯಿತಿ | ದರೋಡೆ | ಮನೆ ಒಡೆದು ಕಳ್ಳತನ | ಕಳ್ಳತನ |
|---|---|---|---|---|---|
| 1992 | 54 | 52 | 19.75 | 25 | 24 |
| 1993 | 51.21 | 20.83 | 15.62 | 21.93 | 29.81 |

**ಕೋಷ್ಟಕ 10.17 : ಧಾರವಾಡ ಜಿಲ್ಲೆಯಲ್ಲಿ 1981 ರಿಂದ 1993 ರವರೆಗೆ ಉಂಟಾದ ವಾಹನ ಅಪಘಾತಗಳ ವಿವರ.**

| | 1981 | 1985 | 1990 | 1991 | 1992 | 1993 |
|---|---|---|---|---|---|---|
| ಒಟ್ಟು ಅಪಘಾತಗಳು | 851 | 1182 | 1498 | 1111 | 794 | 1258 |
| ಕಾರುಗಳಿಂದ | 91 | 60 | 36 | 89 | 48 | 77 |
| ಬಸ್ಸು | 111 | 130 | 65 | 140 | 153 | 179 |
| ಲಾರಿ | 356 | 639 | 948 | 588 | 393 | 586 |
| ಮೋಟಾರು ಸೈಕಲ್ | 44 | 52 | 66 | 56 | 21 | 43 |
| ವ್ಯಾನ್‌ಗಳು | 74 | 3 | - | - | - | - |
| ಜೀಪು | 19 | 24 | 35 | 11 | 24 | 21 |
| ಟ್ಯಾಕ್ಸಿ | 43 | 1 | 85 | 14 | - | - |
| ಟ್ಯಾಂಕರ್ | - | - | - | 9 | - | - |
| ಆಟೋರಿಕ್ಷಾ | 60 | 46 | - | - | 3 | 2 |
| ಟ್ರ್ಯಾಕ್ಟರ್ | - | - | - | 8 | - | - |
| ಇತರ ವಾಹನ | 53 | 226 | 263 | 196 | 152 | 338 |
| ಅಪಘಾತದಿಂದ ಕೊಲ್ಲಲ್ಪಟ್ಟವರು | 198 | 251 | 295 | 89 | 309 | 324 |
| ಗಾಯಗೊಂಡವರು | 675 | 1442 | 1615 | 1335 | 1455 | 2571 |

**ಕೋಷ್ಟಕ 10.18 : ಜಿಲ್ಲೆಯಲ್ಲಿ ಮದ್ಯಪಾನ ನಿಷೇಧಾಜ್ಞೆ ಕಾಯ್ದೆಯ ಅನ್ವಯ ಉಂಟಾದ ಅಪರಾಧಗಳು 1981 ರಿಂದ 1993 ರ ವರೆಗೆ.**

| ವರ್ಷ | ಭಟ್ಟಿ ಇಳಿಸಿ ತೆಗೆದದ್ದು | | ಎಕ್ಸೈಸ್ ಆಕ್ಟ್ ಸಾರಾಯಿಯನ್ನು ಸ್ವಾಧೀನ ಹೊಂದಿರುವುದು | | ಇತರೆ ಅಪರಾಧಗಳು | | ಅಫೀಮು ಪ್ರಕರಣ | | ಗಾಂಜಾ ಪ್ರಕರಣ | | ಎಸ್‌ಐಟಿ ಆಕ್ಟನ ಅನ್ವಯ ಅಪರಾಧ |
|---|---|---|---|---|---|---|---|---|---|---|---|
| 1981 | ಖಟ್ಲೆ | ವ್ಯಕ್ತಿ | ಖಟ್ಲೆ | ವ್ಯಕ್ತಿ | ಖಟ್ಲೆ | ವ್ಯಕ್ತಿ | ಖಟ್ಲೆ | ವ್ಯಕ್ತಿ | ಖಟ್ಲೆ | ವ್ಯಕ್ತಿ | |
| 1981 | - | 38 | - | 26 | - | - | - | - | - | - | 232 |
| 1985 | 1 | - | 322 | 347 | - | - | - | - | - | - | 386 |
| 1987 | - | - | 243 | 274 | - | - | - | - | 17 | 23 | 260 |
| 1988 | - | - | 235 | 269 | 4 | 4 | - | - | 13 | 16 | 239 |

| ವರ್ಷ | ಭಟ್ಟಿ ಇಳಿಸಿ ತೆಗೆದದ್ದು | | ಎಕ್ಸೈಸ್ ಆಕ್ಟ್ ಸಾರಾಯಿಯನ್ನು ಸ್ವಾಧೀನ ಹೊಂದಿರುವುದು | | ಇತರೆ ಅಪರಾಧಗಳು | | ಅಫೀಮು ಪ್ರಕರಣ | | ಗಾಂಜಾ ಪ್ರಕರಣ | | ಎಸ್‌ಐಟಿ ಆಕ್ಟನ ಅನ್ವಯ ಅಪರಾಧ |
|---|---|---|---|---|---|---|---|---|---|---|---|
| | ಖಟ್ಲೆ | ವ್ಯಕ್ತಿ | ಖಟ್ಲೆ | ವ್ಯಕ್ತಿ | ಖಟ್ಲೆ | ವ್ಯಕ್ತಿ | ಖಟ್ಲೆ | ವ್ಯಕ್ತಿ | ಖಟ್ಲೆ | ವ್ಯಕ್ತಿ | |
| 1991 | - | - | 44 | 53 | - | - | - | - | 3 | 1 | 90 |
| 1992 | - | - | - | - | - | - | - | - | - | - | 73 |
| 1993 | 32 | 38 | 32 | 38 | - | - | - | - | 7 | - | 60 |

## ಕೋಷ್ಟಕ 10.19 : ಜಿಲ್ಲೆಯಲ್ಲಿ 1981 ರಿಂದ 1993 ರವರೆಗೆ ಉಂಟಾದ ವರ್ಗೀಕೃತ ಅಪರಾಧಗಳ ವಿವರ.

| ವರ್ಷ | ವರ್ಗ 1 | ವರ್ಗ 2 | ವರ್ಗ 3 | ವರ್ಗ 4 | ವರ್ಗ 5 | ವರ್ಗ 6 | ಮೊತ್ತ |
|---|---|---|---|---|---|---|---|
| 1981 | 495 | 906 | 750 | 446 | 1446 | 560 | 4603 |
| 1985 | 697 | 1272 | 652 | 535 | 1204 | - | 4350 |
| 1990 | 589 | 1309 | 368 | 466 | 629 | 786 | 4147 |
| 1991 | 513 | 925 | 309 | 885 | 530 | 575 | 3737 |
| 1992 | 553 | 931 | 328 | 513 | 680 | 728 | 3731 |
| 1993 | 503 | 838 | 694 | 309 | 26 | 1342 | 3712 |

ವರ್ಗ - 1 - ಸಾರ್ವಜನಿಕ ಶಾಂತತೆಯ ರಕ್ಷಣೆ ಹಾಗೂ ನ್ಯಾಯದ ವಿರುದ್ಧ ಅಪರಾಧಗಳು

ವರ್ಗ - 2 - ಜನರ ವಿರುದ್ಧ ನಡೆದ ಗಂಭೀರ ಅಪರಾಧಗಳು

ವರ್ಗ - 3 - ಜನರ ಮತ್ತು ಆಸ್ತಿಯ ವಿರುದ್ಧ ನಡೆದ ಗಂಭೀರ ಅಪರಾಧಗಳು

ವರ್ಗ - 4 - ಜನರ ವಿರುದ್ಧ ಸಣ್ಣ ಅಪರಾಧಗಳು

ವರ್ಗ - 5 - ಆಸ್ತಿಯ ವಿರುದ್ಧ ಸಣ್ಣ ಅಪರಾಧಗಳು

ವರ್ಗ - 6 - ಇತರ.

## ಕೋಷ್ಟಕ 10.20 ಧಾರವಾಡ ಜಿಲ್ಲೆಯಲ್ಲಿ ಪ್ರಾಸಿಕ್ಯೂಷನ್ ಬಗ್ಗೆ ವಿವರಗಳು (1981 ರಿಂದ 1993)

| ವರ್ಷ | ಕೋರ್ಟಿನಲ್ಲಿ ನಿರ್ಣಯವಾದ ಪ್ರಕರಣಗಳು | ಅಪರಾಧ ನಿರ್ಣಯವಾದ ಪ್ರಕರಣಗಳು | ವಿಮೋಚನೆಯಾದ ಪ್ರಕರಣಗಳು | ಒಡಂಬಡಿಸಲ್ಪಟ್ಟ ಮತ್ತು ವಿಲೇವಾರಿಯಾಗದೇ ಇರುವ ಪ್ರಕರಣಗಳು | ಅಪರಾಧ ನಿರ್ಣಯದ ಪ್ರಮಾಣ |
|---|---|---|---|---|---|
| 1981 | 2466 | 862 | 931 | 673 | 48.1 ಶೇ. |
| 1985 | 2559 | 870 | 1175 | 514 | 12 ಶೇ. |
| 1990 | 1926 | 764 | 1162 | 581 | 39.6 ಶೇ. |
| 1991 | 99 | 641 | 958 | 415 | 40.08 ಶೇ. |
| 1992 | 1460 | 598 | 862 | 944 | 40.95 ಶೇ. |
| 1993 | 2670 | 607 | 1427 | 636 | 22.73 ಶೇ. |

**ಕೋಷ್ಟಕ 10.21 : ಧಾರವಾಡ ಜಿಲ್ಲೆಯಲ್ಲಿ 1981-93 ರವರೆಗೆ, ವಿಶೇಷ ಹಾಗೂ ಸ್ಥಳೀಯ ಕಾಯ್ದೆಯ ಬಗ್ಗೆ ವರದಿಯಾದ ಪ್ರಕರಣಗಳ ಒಟ್ಟು ಸಂಖ್ಯೆ**

| ಅಪರಾಧಗಳು | 1981 | 1985 | 1990 | 1991 | 1992 | 1993 |
|---|---|---|---|---|---|---|
| 1) ಸಾರ್ವಜನಿಕರಿಗಾದ ಅನಿಷ್ಟಕರ ತೊಂದರೆ | 254 | 408 | 313 | 297 | 270 | 250 |
| 2) ಶಸ್ತ್ರಾಸ್ತ್ರ ಕಾಯ್ದೆ | 1 | 2 | 1 | 1 | - | - |
| 3) ಕೆ.ಪಿ. ಆಕ್ಟ್ ಅನ್ವಯ ಗ್ಯಾಂಬ್ಲಿಂಗ್ | 1593 | 696 | 355 | 200 | 344 | 225 |
| 4) ಮಹಿಳೆ ಮತ್ತು ಹುಡುಗಿಯರ ಕಾಯ್ದೆಯಲ್ಲಿ (ಎಸ್.ಐ.ಟಿ.) | 232 | 386 | 62 | 90 | 73 | 55 |
| 5) ಅಬಕಾರಿ ಕಾಯ್ದೆ | 1143 | 322 | 48 | 44 | 44 | 57 |
| 6) ನಾಗರೀಕ ಹಕ್ಕು ಕಾಯ್ದೆ | 24 | 13 | 40 | 52 | 60 | 59 |
| 7) ಕೆ.ಪಿ.ಆಕ್ಟ್ ಸೆಕ್ಷನ್ 96 | 1108 | 779 | 204 | 319 | 283 | 125 |
| 8) ಅರಣ್ಯ ಕಾಯ್ದೆ | 1 | - | 84 | 5 | 49 | - |
| 9) ಇ.ಸಿ. ಆಕ್ಟ | 100 | 20 | 13 | 36 | 12 | 2 |
| 10) ಮಕ್ಕಳ ಕಾಯ್ದೆ | 23 | 9 | - | - | - | - |

ಧಾರವಾಡ ಜಿಲ್ಲೆಯಲ್ಲಿ 1983 ರಿಂದ 1993 ರವರೆಗೆ ಇದ್ದ ಶಾಸನ ಸುವ್ಯವಸ್ಥೆಯ ಬಗ್ಗೆ ಸಂಕ್ಷಿಪ್ತ ವಿವರಗಳನ್ನು ಇಲ್ಲಿ ಕೊಡಲಾಗಿದೆ :

1983 - ಮತೀಯ ಅಥವಾ ಇತರೆ ಗಲಭೆಗಳು ಇರಲಿಲ್ಲ. ಪೋಲೀಸಿನವರು ಗುಂಡುಹಾರಿಸುವ ಪ್ರಕರಣ, ಆಸ್ತಿಪಾಸ್ತಿಗಳಿಗೆ ಹಾನಿ ಮತ್ತು ಲೂಟಿ, ವಿದ್ಯಾರ್ಥಿಗಳಿಂದ ಗಲಭೆ, ಕಾರ್ಮಿಕರ ಗಲಭೆ ಇರಲಿಲ್ಲ. ಹೋಳಿ ಮತ್ತು ರಂಗಪಂಚಮಿ ಹಬ್ಬಗಳ ಸಮಯದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ 144 ನೇಯ ಪ್ರಕರಣದ ಪ್ರಕಾರ ಪ್ರತಿಬಂಧ ಕಾಯ್ದೆಯನ್ನು ಧಾರವಾಡದಲ್ಲಿ ಮಾಡಿದ್ದರು.

1985 - ಶಿಗ್ಗಾಂವಿ ಮತ್ತು ರಾಣೆಬೆನ್ನೂರು ಪೋಲೀಸ್ ವೃತ್ತವನ್ನು ಹೊರತುಪಡಿಸಿ, ಉಳಿದೆಲ್ಲಾ ಭಾಗಗಳಲ್ಲಿಯೂ, ಶಾಸನ ಸುವ್ಯವಸ್ಥೆ ಶಾಂತವಾಗಿತ್ತು. ಹೋಳಿ ಹಬ್ಬದ ಸಮಯದಲ್ಲಿ ಮತ್ತು ಗಣಪತಿ ವಿಸರ್ಜನೆ ಸಮಯದಲ್ಲಿ ಗಲಭೆಗಳುಂಟಾಗಿತ್ತು. ಇದಲ್ಲದೆ, ಸವಣೂರು ಪೋಲೀಸರು 5 ಬಾರಿ ಲಾಠಿಚಾರ್ಜ್ ಮಾಡಿದ್ದರು. ಆಸ್ತಿಪಾಸ್ತಿಗಳಿಗೆ ಹಾನಿ, ವಿದ್ಯಾರ್ಥಿಗಳಿಂದ ಗಲಭೆ, ಕಾರ್ಮಿಕರ ಗಲಭೆಗಳಿರಲಿಲ್ಲ.

1986 - ಹಿರೇಕೆರೂರು ಮತ್ತು ಧಾರವಾಡ ತಾಲೂಕುಗಳನ್ನು ಹೊರತುಪಡಿಸಿ, ಜಿಲ್ಲೆಯಲ್ಲಿ ನ್ಯಾಯ ಸುವ್ಯವಸ್ಥೆ ಶಾಂತವಾಗಿತ್ತು. ಜನವರಿ 86 ರಲ್ಲಿ ಹಂಸಭಾವಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ, ಮತೀಯ ಗಲಭೆಗಳಾದವು. ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿಯೂ ಇಂಜನೀಯರಿಂಗ್ ಕಾಲೇಜು ವಿದ್ಯಾರ್ಥಿಗಳಿಂದ ಗಲಭೆಯಾಗಿತ್ತು. ಏಪ್ರಿಲ್ ತಿಂಗಳಲ್ಲಿ ಅರಳೇಶ್ವರ ಗ್ರಾಮದಲ್ಲಿ ಜಾತ್ರೆಯಲ್ಲಿನ ಗಲಭೆಯನ್ನು ತಡೆಯಲು ಪೋಲೀಸರು ಗುಂಡು ಹಾರಿಸಿದ್ದರು.

1987 - ಈ ಸಾಲಿನಲ್ಲಿ ಶಿಗ್ಗಾಂವಿ ತಾಲೂಕು ಬಂಕಾಪುರ, ಹಾವೇರಿ ತಾಲೂಕು ಆಲದಕಟ್ಟೆ ಮತ್ತು ಕಲಘಟಗಿ ತಾಲೂಕು ಸಂಗಮೇಶ್ವರ ಮುತ್ತಗಿ ಗ್ರಾಮಗಳಲ್ಲಿ ಮತ್ತು ಗದಗನಲ್ಲಿ ಮತೀಯ ಗಲಭೆಗಳಾಗಿದ್ದವು. ಜುಲೈ 87 ರಲ್ಲಿ ಆಲದ ಕಟ್ಟೆ ಗ್ರಾಮದ ಹದ್ದಿನಲ್ಲಿ, ಉಂಟಾದ ವ್ಯಾಜ್ಯ ಸಮಯದಲ್ಲಿ ಪೋಲೀಸರು ಗುಂಡು ಹಾರಿಸಿದ್ದರು. ಈ ಸಾಲಿನಲ್ಲಿ 4 ಬಾರಿ, ಪೋಲೀಸರು ಅಶ್ರುವಾಯು

ಸಿಡಿಸಿದ್ದರು (ಮೇವುಂಡಿ, ಮೈದೂರ, ಮಾಗಾವಿ ಮತ್ತು ಮುತ್ತಗಿ ಗ್ರಾಮಗಳಲ್ಲಿ). ಕಾರ್ಮಿಕರ ಮುಷ್ಕರ, ದೊಂಬಿ ಮತ್ತು ಗಲಭೆಗಳಲ್ಲಿ ಹಾನಿಯಾದ ಪ್ರಕರಣಗಳು, ವಿದ್ಯಾರ್ಥಿಗಳಿಂದ ಹಿಂಸಾತ್ಮಕ ಚಟುವಟಿಕೆಗಳು ಈ ಸಾಲಿನಲ್ಲಿ ಇರಲಿಲ್ಲ.

1988 - ಹೋಳಿ ಹಬ್ಬ ಹಾಗೂ ಗಣಪತಿ ವಿಸರ್ಜನೆ ಸಂದರ್ಭದಲ್ಲಿ ಶಿಗ್ಗಾಂವಿಯಲ್ಲಿ ಗಲಭೆಗಳಾಗಿತ್ತು. ಮಾರ್ಚ್ 88 ರಲ್ಲಿ ಶಿಗ್ಗಾಂವಿ ನಗರದಲ್ಲಿಯೂ, ಏಪ್ರಿಲ್ 88 ರಲ್ಲಿ, ರಾಣೆಬೆನ್ನೂರಿನಲ್ಲಿಯೂ, ಮೇಯಲ್ಲಿ ಹಾವೇರಿಯಲ್ಲಿಯೂ ಪೋಲೀಸರು ಅಶ್ರುವಾಯು ಸಿಡಿಸಿದ ಪ್ರಕರಣಗಳು ದಾಖಲಾಗಿವೆ. ಈ ಸಾಲಿನಲ್ಲಿ ಯಾವುದೇ ಕಾರ್ಮಿಕರ ಮುಷ್ಕರ ಮತ್ತು ವಿದ್ಯಾರ್ಥಿ ಮುಷ್ಕರ ನಡೆಯಲಿಲ್ಲ.

1991 - ಈ ಸಾಲಿನಲ್ಲಿ, ಹಾನಗಲ್ಲು, ಹಿರೇಕೆರೂರುಗಳಲ್ಲಿ ಮತೀಯ ಗಲಭೆಗಳಾಗಿದ್ದವು. ಮಾರ್ಚ್ ತಿಂಗಳಲ್ಲಿ ನಂದಿ ಮತ್ತು ಹುಬ್ಬಳಿ ಟೆಕ್ಸ್‌ಟೈಲ್ಸ್ ಮಿಲ್ಲಿನ 100 ಕಾರ್ಮಿಕರು ಧರಣಿ ಸತ್ಯಾಗ್ರಹ ಹೂಡಿದ್ದರು. ಏಪ್ರಿಲ್ ತಿಂಗಳಲ್ಲಿ ಸ್ಪೀವನ ಫ್ಯಾಕ್ಟರಿಯ ಕುಮಾರ ಪಟ್ಟಣದ ಕಾರ್ಮಿಕರು ಸತ್ಯಾಗ್ರಹ ನಡೆಸಿದ್ದರು. ನವೆಂಬರ್‌ನಲ್ಲಿ ಸುಮಾರು 21 ಇತರೆ ಮುಷ್ಕರ ಪ್ರಕರಣಗಳು ದಾಖಲಾಗಿವೆ. ಡಿಸೆಂಬರ್ ತಿಂಗಳಲ್ಲಿ ಮತೀಯ ಗಲಭೆಯನ್ನು ಚದರಿಸಲು ಪೋಲೀಸರು ಹಾವೇರಿಯಲ್ಲಿ ಒಮ್ಮೆ ಗುಂಡು ಹಾರಿಸಿದ್ದರು.

1993 - ಈ ಸಾಲಿನಲ್ಲಿ ಹಾವೇರಿ ತಾಲೂಕಿನ ದೇವಿಹೊಸೂರು ಗ್ರಾಮದಲ್ಲಿ ಮತ್ತು ರೋಣ ತಾಲೂಕಿನ ಅಬ್ಬಿಗೇರಿ ಗ್ರಾಮದಲ್ಲಿಯೂ ಮತೀಯ ಗಲಭೆಗಳಾಗಿದ್ದವು. ಹಾನಗಲ್‌ನಲ್ಲಿ ಅಕ್ಟೋಬರ್ ತಿಂಗಳಲ್ಲಿ ಪೋಲೀಸರು ಜನರ ಗಲಭೆಯ ಕಾರಣ ಲಾಠಿ ಪ್ರಹಾರ ನಡೆಸಿದ್ದರು. ಈ ಸಾಲಿನಲ್ಲಿ ಪೋಲೀಸರು ಗುಂಡು ಹಾರಿಸಿದ ಪ್ರಕರಣವಾಗಲೀ, ಕಾರ್ಮಿಕರ ಸಂಪಾಗಲೀ ಇರಲಿಲ್ಲ.

1992, 1993 ಹಾಗೂ 1994 ರಲ್ಲಿ ಆಗಸ್ಟ್ 15 ಮತ್ತು ಜನವರಿ 26 ಕ್ಕೆ ಹುಬ್ಬಳ್ಳಿಯ ಇದ್‌ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸುವ ವಿವಾದದಲ್ಲಿ ಪ್ರಕ್ಷುಬ್ಧ ವಾತಾವರಣವಿದ್ದು 1994 ರ ಆಗಸ್ಟ್ 15 ಕ್ಕೆ ಗೋಳಿಬಾರಾಗಿ ಆರು ಸಾವಿನ ಪ್ರಕರಣಗಳಾದವು.

**ಕೋಷ್ಟಕ 10.21 : ಧಾರವಾಡ ಜಿಲ್ಲೆಯಲ್ಲಿ 1983 ಮತ್ತು 1993 ರಲ್ಲಿ ಇದ್ದ ಪೋಲೀಸ್ ಸಿಬ್ಬಂದಿಯ ವಿವರ.**

| | | 1983 ರಲ್ಲಿ | | 1993 ರಲ್ಲಿ | |
|---|---|---|---|---|---|
| | | ಖಾಯಂ | ಹಂಗಾಮಿ | ಖಾಯಂ | ಹಂಗಾಮಿ |
| ಸಿವಿಲ್ ಪೋಲೀಸ್ | | | | | |
| 1) | ಪೋಲೀಸ್ ಅಧೀಕ್ಷಕರು | 1 | 1 | 1 | - |
| 2) | ಡಿ.ಎಸ್.ಪಿ\ಎ.ಎಸ್.ಪಿ. | 4 | 1 | 4 | - |
| 3) | ಅಡಿಶನಲ್ ಎಸ್.ಪಿ. | - | - | 1 | - |
| 4) | ಸಿ.ಪಿ.ಐ. | 11 | - | 14 | - |
| 5) | ಪಿ.ಎಸ್.ಐ. | 50 | 14 | 52 | - |
| 6) | ಎ.ಎಸ್.ಐ. | 5 | - | 61 | - |
| 7) | ಹೆಚ್.ಸಿ. | 289 | 11 | 296 | - |
| 8) | ಪಿ.ಸಿ | 1185 | 71 | 949 | - |
| 9) | ಮಹಿಳಾ ಹೆಚ್.ಸಿ | - | - | 10 | - |
| 10) | ಮಹಿಳಾ ಪಿ.ಸಿ. | - | - | 29 | - |
| ಕವಾಯತು ಪಡೆ | | | | | |
| 11) | ಡಿ.ಎಸ್.ಪಿ. | - | - | - | 1 |

| | | 1983 ರಲ್ಲಿ | | 1993 ರಲ್ಲಿ | |
|---|---|---|---|---|---|
| | | ಖಾಯಂ | ಹಂಗಾಮಿ | ಖಾಯಂ | ಹಂಗಾಮಿ |
| 12) | ಆರ್.ಪಿ.ಇ. | 1 | - | 2 | - |
| 13) | ಆರ್.ಎನ್.ಐ. | 7 | - | 9 | - |
| 14) | ಎ.ಆರ್.ಎಸ್.ಐ. | 14 | - | 15 | - |
| 15) | ಎ.ಪಿ.ಸಿ. | 396 | 17 | 299 | 2 |
| 16) | ಫಿಟ್ಟರ್ಸ್ | 2 | - | 2 | - |
| 17) | ಗ್ಯಾರೇಜ್ ಅಸಿಸ್ಟಂಟ್ | 2 | - | 2 | - |
| ಕಛೇರಿ ಸಿಬ್ಬಂದಿ | | | | | |
| 18) | ಗೆಜೆಟೆಡ್ ಅಸಿಸ್ಟಂಟ್ | 1 | - | 1 | - |
| 19) | ಶಾಖಾ ಅಧೀಕ್ಷರು 1 | - | 2 | - | |
| 20) | ಪ್ರ.ದ.ಸಹಾಯಕ | 8 | 4 | 10 | - |
| 21) | ದ್ವಿ.ದ.ಸಹಾಯಕ | 21 | 1 | 15 | - |
| 22) | ಶೀಘ್ರಲಿಪಿಗಾರ | 1 | - | 5 | - |
| 23) | ಬೆರಳಚ್ಚುಗಾರ | 1 | - | 5 | - |
| 24) | ದಲಾಯತ | - | - | 1 | - |
| | ಮೊತ್ತ | 2000 | 120 | 1789 | 3 |

**ಪೋಲೀಸ್ ಕಲ್ಯಾಣ ನಿಧಿ :** 1952 ರಲ್ಲಿ ಪೋಲೀಸ್ ಕಲ್ಯಾಣ ನಿಧಿಯ ವತಿಯಿಂದ, ಪೋಲೀಸ್ ಸಿಬ್ಬಂದಿಗಾಗಿ ಪ್ರತ್ಯೇಕ ಕೋಳಿಸಾಕಣೆ ಕೇಂದ್ರ, ಬಡಗಿ ಕೆಲಸದ ಕೇಂದ್ರ, ಹೊಲಿಯುವ ತರಗತಿಗಳು, ಬಟ್ಟೆ ನೇಯುವ ತರಗತಿಗಳು ಮೊದಲಾದವು ಧಾರವಾಡದಲ್ಲಿ ಇದ್ದವು. ಇದಲ್ಲದೆ, ಒಂದು ಅರೆಕಾಲಿಕ ಆಸ್ಪತ್ರೆಯೂ ಧಾರವಾಡದಲ್ಲಿ ಇದ್ದಿತು. ನಂತರ 1961 ರಲ್ಲಿ ಕರ್ನಾಟಕ ಪೋಲೀಸ್ ಬೆನವಲೆಂಟ್ ಫಂಡ್ ಅನ್ನು ರಾಜ್ಯದ ಪೋಲೀಸ್ ಇಲಾಖೆಯ ವತಿಯಿಂದ ಪ್ರಾರಂಭಿಸಲಾಯಿತು. ಇದರ ಶಾಖೆಗಳು ಪ್ರತೀ ಜಿಲ್ಲೆಯಲ್ಲಿಯೂ ಪ್ರಾರಂಭವಾದವು. 1983 ರ ಹೊತ್ತಿಗೆ ಧಾರವಾಡ ಜಿಲ್ಲಾ ಪೋಲೀಸ್ ಬೆನವಲೆಂಟ್ ಫಂಡ್‌ನ ಒಟ್ಟು ಆದಾಯ ಸುಮಾರು 3 ಲಕ್ಷ ರೂ. ಇದ್ದಿತು. ಇದರ ಆಶ್ರಯದಲ್ಲಿ 6 ಹಾಸಿಗೆಯ ಒಂದು ಆಸ್ಪತ್ರೆ ಧಾರವಾಡದ ಪೋಲೀಸ್ ಲೈನ್ಸ್‌ನಲ್ಲಿ ಪ್ರಾರಂಭವಾಯಿತು. ಇದಲ್ಲದೆ ಒಂದು ಕ್ಷೀರಕೇಂದ್ರ, ಹಿಟ್ಟಿನ ಗಿರಣಿ, ಬಯಲುಮಂಟಪ, ಹೊಲಿಗೆ ಕೇಂದ್ರ, ಬೇಕರಿ, ಉದ್ಯಾನವನ ಮೊದಲಾದವನ್ನು ಒದಗಿಸಲಾಗಿತ್ತು. 1987 ರ ಹೊತ್ತಿಗೆ ಒಂದು ಸಿನಿಮಾ ಯಂತ್ರ, ಯೋಗ್ಯದರದ ಕಾಳಿನ ಅಂಗಡಿ, ಪಾಪಕಾರ್ನ್ ಯಂತ್ರ, ಬಾಲವಾಡಿ, ವಿದ್ಯಾಭ್ಯಾಸದ ಸಲುವಾಗಿ ಸಹಾಯಧನ, ದೂರದರ್ಶನ ಮೊದಲಾದವುಗಳನ್ನು ಪೋಲೀಸ್ ಸಿಬ್ಬಂದಿ ಹಾಗೂ ಕುಟುಂಬದವರಿಗೆ ಒದಗಿಸಲಾಗಿತ್ತು. 1993 ರ ಹೊತ್ತಿಗೆ ಈ ಜಿಲ್ಲೆಯಲ್ಲಿ, ಪೋಲೀಸ್ ಕಲ್ಯಾಣ ನಿಧಿಗೆ ವರಮಾನ ರೂ.5.5 ಲಕ್ಷವಿದ್ದಿತು. ಹಾಗೂ ಮೇಲೆ ತಿಳಿಸಿರುವ ಎಲ್ಲಾ ವಿಧವಾದ ಸೌಲಭ್ಯವನ್ನು ಪೋಲೀಸ್‌ರಿಗೆ ಹಾಗೂ ಕುಟುಂಬದವರಿಗೆ ಒದಗಿಸಲಾಗಿತ್ತು.

**ಗ್ರಾಮೀಣ ರಕ್ಷಣಾ ಪಡೆ :** ಸಂವಿಧಾನವು ಜಾರಿಗೆ ಬರುವ ಮುನ್ನ ಇದ್ದ ವಿಲೇಜ್ ಪೋಲೀಸ್ ರೂಲ್ಸ್‌ನ್ನು ತೆಗೆದು ಹಾಕಿ ಗ್ರಾಮೀಣ ರಕ್ಷಣಾ ಪಡೆ (ವಿಲೇಜ್ ಡಿಫೆನ್ಸ್ ಪಾರ್ಟಿ) ಎಂಬ ಸ್ವಯಂಸೇವಾ ಬಲವು ಹಿಂದೆ ಇದ್ದ ಗ್ರಾಮೀಣ ಪೋಲೀಸರ ಕಾರ್ಯವನ್ನು ನಿರ್ವಹಿಸುತ್ತಿವೆ. ಈ ಬಲವು ಅಪರಾಧಗಳನ್ನು ತಡೆಗಟ್ಟಲು ಮತ್ತು ಶಾಂತಿಪಾಲನೆಗಳಿಗೆ ಪೋಲೀಸರಿಗೆ ಸಹಾಯ ಮಾಡುವ ಒಂದು ಘಟಕವಾಗಿದೆ. ಈ ವಿಲೇಜ್ ಡಿಫೆನ್ಸ್ ಪಾರ್ಟಿಯ ಮುಖ್ಯ ಕಾರ್ಯಗಳೇನೆಂದರೆ (1) ಗ್ರಾಮ ರಕ್ಷಣೆ (2) ಅಪರಾಧಗಳನ್ನು ತಡೆಗಟ್ಟಲು ಗ್ರಾಮದಲ್ಲಿ ಗಸ್ತು ತಿರುಗುವುದು (3) ಗ್ರಾಮದಲ್ಲಿನ ಆಸ್ತಿ ಹಾಗೂ ವ್ಯಕ್ತಿಗಳ ರಕ್ಷಣೆ (4) ಅವಶ್ಯಕತೆ

ಇದ್ದಾಗ, ಪೋಲೀಸರಿಗೆ ಶಾಂತಿಪಾಲನೆಯಲ್ಲಿ ಸಹಾಯ ಮಾಡುವುದು, (5) ಕಾಲಕಾಲಕ್ಕೆ ಪೋಲೀಸ್ ಇಲಾಖೆಯಿಂದ ಸೂಚಿಸಲ್ಪಟ್ಟ ಕಾರ್ಯಗಳನ್ನು ನಿರ್ವಹಿಸುವುದು.

1993 ರ ಹೊತ್ತಿಗೆ ಜಿಲ್ಲೆಯಲ್ಲಿನ 245 ಗ್ರಾಮಗಳಲ್ಲಿ ವಿಲೇಜ್ ಡಿಫೆನ್ಸ್ ಪಾರ್ಟಿಗಳನ್ನು ಮಾಡಲಾಗಿತ್ತು. 198 ದಳಪತಿಗಳು ಮತ್ತು 6,180 ಸದಸ್ಯರು ಇದ್ದರು.

1983 ರಿಂದ 1993 ರ ವರೆಗೆ ಇದ್ದ ದಳಪತಿಗಳ ಹಾಗೂ ಸದಸ್ಯರ ಸಂಖ್ಯೆ ಹೀಗಿದೆ. 1983 - 100 (ದಪ) - 38,319 (ಸ); 1985 - 130 (ದಪ) - 38,319 (ಸ); 1987 - 150 (ದಪ) - 4,986 (ಸ); 1988 - 198 (ದಪ) - 6,180 (ಸ); ಮತ್ತು 1991 - 198 (ದಪ) - 6,180 (ಸ).

## ಕಾರಾಗೃಹಗಳು

1956 ರವರೆಗೂ ಜಿಲ್ಲೆಯಲ್ಲಿ ಜಿಲ್ಲಾ ಕಾರಾಗೃಹ ಇರಲಿಲ್ಲ. ಒಂದು ತಿಂಗಳಿಗಿಂತಲೂ ಹೆಚ್ಚು ಜೈಲುವಾಸ ಅನುಭವಿಸ ಬೇಕಾದವರನ್ನು ಬೆಳಗಾವಿಯ ಕೇಂದ್ರ ಕಾರಾಗೃಹಕ್ಕೆ ವರ್ಗಾಯಿಸುತ್ತಿದ್ದರು. ಆಗ ಜಿಲ್ಲೆಯಲ್ಲಿ 16 ಉಪ ಕಾರಾಗೃಹಗಳಿದ್ದವು. ಅವುಗಳಲ್ಲಿ ಎರಡು ಧಾರವಾಡದಲ್ಲಿ ಮಾಮಲತ್‌ದಾರರ ಕಛೇರಿಯ ಕಟ್ಟಡದಲ್ಲಿ ಮತ್ತು ಬಾರ್‌ಸ್ಟಲ್ ಶಾಲೆಯಲ್ಲಿ ಇದ್ದವು. ಉಳಿದವು ಈ ಕೆಳಕಂಡ ಸ್ಥಳಗಳಲ್ಲಿದ್ದವು. (1) ಗದಗ (2) ಹಾನಗಲ್ಲು (3) ಹಾವೇರಿ (4) ಹಿರೇಕೆರೂರು) (5) ಹುಬ್ಬಳ್ಳಿ (6) ಕಲಘಟಗಿ (7) ಕುಂದಗೋಳ (8) ಮುಂಡರಗಿ (9) ನರಗುಂದ (10) ನವಲಗುಂದ (11) ರಾಣೆಬೆನ್ನೂರು (12) ರೋಣ (13) ಶಿಗ್ಗಾಂವಿ ಮತ್ತು (14) ಶಿರಹಟ್ಟಿ.

ಮಾಮಲತ್‌ದಾರರ ಕಛೇರಿಯಲ್ಲಿದ್ದ ಉಪಕಾರಾಗೃಹದ ಆಡಳಿತವನ್ನು ಮಾಮಲತ್‌ದಾರರೇ ನೋಡಿಕೊಳ್ಳುತ್ತಿದ್ದರು ಮತ್ತು ಬಾರ್‌ಸ್ಟಲ್ ಶಾಲೆಯಲ್ಲಿನ ಉಪಕಾರಾಗೃಹವನ್ನು ಶಾಲೆಯ ಗವರ್ನರ್ ನೋಡಿಕೊಳ್ಳುತ್ತಿದ್ದರು. ಉಳಿದೆಲ್ಲಾ ಕಾರಾಗೃಹಗಳನ್ನು ಅರೆಕಾಲಿಕ ಅಧೀಕ್ಷಕರು ನೋಡಿಕೊಳ್ಳುತ್ತಿದ್ದರು. ಈ ಎಲ್ಲಾ ಕಾರಾಗೃಹಗಳ ಭದ್ರತೆಯನ್ನು ಮತ್ತು ಅಪರಾಧಿಗಳನ್ನು ಕಾಯುವುದನ್ನು ಪೋಲೀಸ್ ಇಲಾಖೆ ಮಾಡುತ್ತಿತ್ತು. ಇವಲ್ಲದೆ ಈ ಕೆಳಕಂಡ ಸ್ಥಳಗಳಲ್ಲಿ ಪೋಲೀಸ್ ಲಾಕ್ ಅಪ್‌ಗಳಿದ್ದವು. ಆಡೂರು, ಅಣ್ಣಿಗೇರಿ, ಬ್ಯಾಡಗಿ, ಧಾರವಾಡ ತಾಲೂಕು, ಧಾರವಾಡ ಶಹರ, ಗಜೇಂದ್ರಗಡ, ಗದಗ ತಾಲೂಕು, ಗುತ್ತಲ, ಹಂಸಭಾವಿ, ಹಾನಗಲ್ ತಾಲೂಕು, ಹಾವೇರಿ ತಾಲೂಕು, ಹಿರೇಕೆರೂರು, ಹುಬ್ಬಳ್ಳಿ ಶಹರ, ಕಲಘಟಗಿ, ಕುಂದಗೋಳ, ಮುಂಡರಗಿ, ನರಗುಂದ, ರಾಣೆಬೆನ್ನೂರು, ರೋಣ, ಸವಣೂರು, ಶಿಗ್ಗಾಂವಿ, ಶಿರಹಟ್ಟಿ ಮತ್ತು ತಡಸ.

**ಬಾರ್ಸ್ಟಲ್ ಶಾಲೆ, ಧಾರವಾಡ** : ಮುಂಬೈ ಬಾರ್‌ಸ್ಟಲ್ ಶಾಲಾ ಅಧಿನಿಯಮ (1929) ದಂತೆ 1931 ರಲ್ಲಿ, ಸಂಪೂರ್ಣ ಮುಂಬೈ ಅಧಿಪತ್ಯಕ್ಕೆ ಧಾರವಾಡದಲ್ಲಿ ಬಾರ್‌ಸ್ಟಲ್ ಶಾಲೆ ಆರಂಭವಾಯಿತು. ಈ ಶಾಲೆಯಲ್ಲಿ 16 ರಿಂದ 21 ವರ್ಷ ವಯಸ್ಸಿನ ಅಂತರದಲ್ಲಿರುವ ಬಾಲಾಪರಾಧಿಗಳನ್ನು (ಬಾಲಕರು ಮಾತ್ರ) ಇರಿಸುತ್ತಿದ್ದರು. ಇದರ ಮೇಲ್ವಿಚಾರಕರಾಗಿ, 'ಗವರ್ನರ್'ರವರು ಇರುತ್ತಿದ್ದರು. ಇವರು ಜಿಲ್ಲಾ ಕಾರಾಗೃಹದ ಅಧೀಕ್ಷಕರ ಹುದ್ದೆಯಲ್ಲಿರುತ್ತಿದ್ದರು. ಇವರಲ್ಲದೆ, ಒಬ್ಬ ಡೆಪ್ಯೂಟಿ ಗವರ್ನರ್, ಇಬ್ಬರು ಅಧಿಕ ಡೆಪ್ಯೂಟಿ ಗವರ್ನರ್‌ಗಳು, ಕಾರಕೂನರು, 8 ಹೆಡ್‌ಮಾಸ್ಟರ್‌ಗಳು, ಉಪಾಧ್ಯಾಯರು, 48 ಮೇಲುಸ್ತುವಾರಿ ಸಿಬ್ಬಂದಿ, ಇಬ್ಬರು ನರ್ಸ್‌ಗಳು, ಒಬ್ಬ ಕಾಂಪೌಂಡರ್, 9 ತಾಂತ್ರಿಕ ಶಿಕ್ಷಕರು ಇದ್ದರು. ಈ ಶಾಲೆಯಲ್ಲಿ 1955 ರಲ್ಲಿ 549 ಬಾಲಕರು ಇದ್ದರು. 1950, 51, 52 ರಲ್ಲಿ ಈ ಶಾಲೆಯಲ್ಲಿನ ಸರಾಸರಿ ಸಂಖ್ಯೆ ಕ್ರಮವಾಗಿ 327, 287 ಮತ್ತು 272 ಇದ್ದಿತು. ಶಾಲೆಗೆ ದಾಖಲಾಗುವಾಗ 3 ನೇ ತರಗತಿಯವರೆಗೂ ಕಲಿಯದೇ ಇದ್ದ ಬಾಲಕರಿಗೆ, ಅಕ್ಷರಾಭ್ಯಾಸ ತರಗತಿಗಳಿಗೆ ಸೇರಿಸುತ್ತಿದ್ದರು. ಮರಾಠಿ, ಗುಜರಾತಿ, ಕನ್ನಡ ಮತ್ತು ಉರ್ದು ಭಾಷೆಗಳನ್ನು ಇಲ್ಲಿ ಕಲಿಸುತ್ತಿದ್ದರು. ಇದಲ್ಲದೆ ವೃತ್ತಿ ಶಿಕ್ಷಣದಲ್ಲಿ ಬಡಿಗತನ, ಪಾಲೀಶ ಮಾಡುವುದು, ಯಂತ್ರಗಳಲ್ಲಿ ತರಬೇತಿ, ಬಿದಿರಿನ ಕೆಲಸ, ಬಟ್ಟೆ ಹೊಲಿಯುವುದು, ವ್ಯವಸಾಯ, ಹೈನುಗಾರಿಕೆ, ಬಟ್ಟೆ ಒಗೆಯುವುದು ಮೊದಲಾದ ತರಬೇತಿಯನ್ನು ಕೊಡುತ್ತಿದ್ದರು. ಈ ಶಾಲೆಯ ಮಕ್ಕಳಿಗೆ ದೈಹಿಕ ಶಿಕ್ಷಣವೂ ದಿನಚರಿಯಾಗಿತ್ತು.

1952 ರಲ್ಲಿ ಈ ಶಾಲೆಯ ವ್ಯವಸ್ಥೆಯ ಖರ್ಚು ರೂ.1,80,322 ಇದ್ದಿತು. ಪ್ರತಿ ಬಾಲಕನಿಗೆ ಖರ್ಚು 693 ರೂ. ಆಗಿದ್ದಿತು. ಶಾಲೆಯಲ್ಲಿನ ಯಂತ್ರಾಗಾರಗಳಿಂದ ರೂ.6,517 ಲಾಭ ಬಂದಿದ್ದು, ತೋಟದ ಬೆಳೆಗಳಿಂದ ರೂ. 14,000 ಲಾಭ ಬಂದಿದ್ದಿತು. ಬಾರ್‌ಸ್ಟಲ್ ಶಾಲೆಗೆ, 11 ಸದಸ್ಯರ ವೀಕ್ಷಕರ ಸಮಿತಿ ಇದ್ದಿತು. ಈ 11 ಸದಸ್ಯರಲ್ಲಿ 7 ಮಂದಿ ಅಧಿಕಾರಿಗಳು. ಈಗ ಇದರ ಮುಖ್ಯಸ್ಥರು ಮುಖ್ಯ ಜೈಲರ್ ಆಗಿದ್ದಾರೆ. ಅವರ ನೆರವಿಗೆ ಒಬ್ಬ ವೈದ್ಯಾಧಿಕಾರಿಸಹಿತ ಒಟ್ಟು 78 ಸಿಬ್ಬಂದಿ ಇದೆ. ಇದು 70 ಎಕರೆ ಪ್ರದೇಶದಲ್ಲಿ ಇದ್ದು 1992-93 ರಲ್ಲಿ 183 ಬಾಲಾಪರಾಧಿಗಳು ಇದ್ದರು.

1956 ರ ಹೊತ್ತಿಗೆ ಹುಬ್ಬಳ್ಳಿಯಲ್ಲಿ ಒಂದು ಸರ್ಕಾರೀ ಪ್ರಮಾಣಿತ ಶಾಲೆ (ಸರ್ಟಿಫೈಟ್ ಸ್ಕೂಲ್) ಇದ್ದಿತು. ಈ ಶಾಲೆಯಲ್ಲಿನ ಮಕ್ಕಳಿಗೆ, ಪ್ರಾಥಮಿಕ ಶಿಕ್ಷಣ ಮತ್ತು ಬಟ್ಟೆ ಹೊಲಿಯುವಿಕೆ, ಅಡಿಗೆ ಮಾಡುವುದು, ಕಸೂತಿ ಮೊದಲಾದ ಕೆಲಸಗಳಲ್ಲಿ ತರಬೇತಿಯನ್ನು ಕೊಡಲಾಗುತ್ತಿತ್ತು. ಈ ಶಾಲೆಗೆ ಒಂದು ವೀಕ್ಷಕರ ಸಮಿತಿ ಇದ್ದು ಅದರ ಅಧ್ಯಕ್ಷರಾಗಿ, ಧಾರವಾಡದ ಜಿಲ್ಲಾ ಮ್ಯಾಜಿಸ್ಟ್ರೇಟರು, ಇದ್ದರು. ಅಲ್ಲದೆ ಹುಬ್ಬಳ್ಳಿಯ ಸಿಟಿ ಮ್ಯಾಜಿಸ್ಟ್ರೇಟ್, ಆರಕ್ಷಕ ಅಧೀಕ್ಷಕರು, ಧಾರವಾಡ, ಇವರುಗಳು ಪದನಿಮಿತ್ತ ಸದಸ್ಯರಾಗಿರುತ್ತಿದ್ದರು. 1956 ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಧಾರವಾಡ, ಹುಬ್ಬಳ್ಳಿ, ಗದಗ, ರಾಣೆಬೆನ್ನೂರುಗಳಲ್ಲಿ ಬಾಲಾಪರಾಧಿಗಳ ನ್ಯಾಯಾಲಯವಿದ್ದವು. ಬಾಲಾಪರಾಧಿಗಳ ನ್ಯಾಯಾಲಯಗಳಿಗೆ ಪ್ರತ್ಯೇಕ ನ್ಯಾಯಾಧೀಶರು ಜಿಲ್ಲಾಮಟ್ಟದಲ್ಲಿ ಇರಲಿಲ್ಲ. ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಮ್ಯಾಜಿಸ್ಟ್ರೇಟರು ಈ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಪ್ರತೀ ನ್ಯಾಯಾಲಯಕ್ಕೂ ಇಬ್ಬರು ಮಹಿಳಾ ಗೌರವ ನ್ಯಾಯಾಧೀಶರನ್ನು ನೇಮಕ ಮಾಡಿದ್ದರು.

**ಗೃಹರಕ್ಷಕ ದಳ** : 1956 ರ ಹೊತ್ತಿಗೆ ಪ್ರತೀ ಜಿಲ್ಲೆಗೆ ಒಬ್ಬ ಕಮಾಂಡೆಂಟ್ (ಸಮಾದೇಷ್ಟರು) ಇರುತ್ತಿದ್ದರು. ಈ ಕಮಾಂಡೆಂಟ್‌ಗಳನ್ನು ಸರ್ಕಾರವು ನೇಮಕ ಮಾಡುತ್ತಿದ್ದು, ಯಾವ ವಿಧವಾದ ವೇತನವೂ ದೊರೆಯುತ್ತಿರಲಿಲ್ಲ. ಈ ದಳದ ಸದಸ್ಯರು ಯಾವ ಮತೀಯ ಅಥವಾ ರಾಜಕೀಯ ಪಕ್ಷಕ್ಕೆ ಸೇರುವಂತಿಲ್ಲ. ಗೃಹರಕ್ಷಕ ದಳಕ್ಕೆ 20 ರಿಂದ 50 ವರ್ಷ ವಯಸ್ಸಿನ 4 ನೇ ತರಗತಿಯವರೆಗೆ ಅಭ್ಯಾಸ ಮಾಡಿದ ಯಾವುದೇ ವ್ಯಕ್ತಿ ಸೇರಬಹುದಾಗಿತ್ತು. ಧಾರವಾಡ ಜಿಲ್ಲೆಯಲ್ಲಿ ಗೃಹರಕ್ಷಕದಳವನ್ನು 1.10.1947 ರಲ್ಲಿ ಪ್ರಾರಂಭಿಸಲಾಯಿತು. ಜಿಲ್ಲೆಯಲ್ಲಿ ಈ ಕೆಳಗಿನ 15 ಸ್ಥಳಗಳಲ್ಲಿ ಗೃಹರಕ್ಷಕ ಕೇಂದ್ರಗಳನ್ನು ಸ್ಥಾಪಿಸಲಾಯಿತು (1953). ಅವೆಂದರೆ, ಅಣ್ಣಿಗೇರಿ, ಧಾರವಾಡ, ಗದಗ, ಹಾನಗಲ್, ಹಾವೇರಿ, ಹುಬ್ಬಳ್ಳಿ, ಕಲಘಟಗಿ, ಲಕ್ಷ್ಮೇಶ್ವರ, ಮುಂಡರಗಿ, ನರಗುಂದ, ನವಲಗುಂದ, ರಾಣೆಬೆನ್ನೂರು, ರೋಣ, ಸವಣೂರು ಮತ್ತು ಶಿಗ್ಗಾಂವಿ. 1993 ರಲ್ಲಿ ಇಲ್ಲಿನ ಗೃಹರಕ್ಷಕ ದಳದ ಒಟ್ಟು ಸಂಖ್ಯೆ 791.

**ಬಾಲಾಪರಾಧಿಗಳ ಕಾರಾಗೃಹ** : ಈ ಕಾರಾಗೃಹವು 1914 ರಲ್ಲಿ ಸ್ಥಾಪಿತವಾಯಿತು. ಬಾರ್‌ಸ್ಟಲ್ ಶಾಲೆಯಲ್ಲಿ ಇದು ಕಾರ್ಯನಿರ್ವಹಿಸುತ್ತಿದೆ. ಇಲ್ಲಿ 'ಸಿ' ದರ್ಜೆ ಅಪರಾಧಿಗಳನ್ನು ಮಾತ್ರ ಇಟ್ಟುಕೊಳ್ಳಲಾಗುತ್ತಿದೆ. 1988-89 ರಿಂದ 1992-93 ರ ವರೆಗೆ ಕಾರಾಗೃಹದಲ್ಲಿದ್ದ ಸರಾಸರಿ ಅಪರಾಧಿಗಳ ಸಂಖ್ಯೆ. 1988-89 - 57; 1989-90 - 63; 1990-91 - 57; 1991-92 - 44; 1992-93 - 38.